ಸಂಪುಟ 01 | ಸಂಚಿಕೆ 193 | ಸೋಮವಾರ 15 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ**

ಹಿರಿಯ ನಾಗರಿಕರು ಎದುರಿಸುತ್ತಿರುವ ದೈಹಿಕ, ಆರ್ಥಿಕ ಮತ್ತು ಭಾವನಾತ್ಮಕ ಹಿಂಸೆಯ ವಿರುದ್ಧ ಧ್ವನಿಯೆತ್ತಲು ವಿಶ್ವಸಂಸ್ಥೆಯು ಈ ದಿನವನ್ನು ಜಾರಿಗೆ ತಂದಿದೆ. ಹಿರಿಯರಿಗೆ ಸುರಕ್ಷಿತ ವಾತಾವರಣ ಕಲ್ಪಿಸುವ ಗುರಿಯನ್ನು ಇದು ಹೊಂದಿದೆ.

**2) ವಿಶ್ವ ಪವನ ದಿನ**

ಪವನ (ಗಾಳಿ) ಶಕ್ತಿಯ ಮಹತ್ವ, ಅದರಿಂದ ಪರಿಸರಕ್ಕಾಗುವ ಪ್ರಯೋಜನಗಳು ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ಅಪಘಾತ ಮತ್ತು ಆಘಾತ ಎರಡೂ ಒಂದೇ ಬಗೆಯವು. ಅಪರಿಚಿತರು ರಸ್ತೆಯಲ್ಲಿ ಗುದ್ದಿದರೆ ಅದು ಅಪಘಾತ. ಪರಿಚಿತರು ನಂಬಿಕೆಗೆ ಗುದ್ದು ಕೊಟ್ಟರೆ ಅದರಿಂದ ಆಘಾತ, ಅಷ್ಟೇ.

– ರತನ್ ಟಾಟಾ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587

# ನಿರುದ್ಯೋಗಿಗಳಿಗೆ ಗುಡ್‌ನ್ಯೂಸ್ ನೀಡಿದ ಸಿಎಂ ಡಿಕೆ ಶಿವಕುಮಾರ್, ಮಹತ್ವದ ನಿರ್ಧಾರ

**ನೈಜ್ಯ ದೆಸೆ ನ್ಯೂಸ್**

ಬೆಂಗಳೂರು ಮುಖ್ಯಮಂತ್ರಿ ಡಿಕೆ ಶಿವಕುಮಾರ್ (ಆಏ ಖುತಚಿಇಣಟಚಿಡಿ) ಅವರು ಅಧಿಕಾರವಹಿಸಿಕೊಂಡ ಬಳಿಕ ರಾಜ್ಯದ ಜನರಿ ಹಲವು ಮಹತ್ವದ ಯೋಜನೆಗಳ ಜಾರಿಗೆ ಮುಂದಾಗಿದ್ದಾರೆ. ಸಿಕ್ಕ 2 ವರ್ಷದಲ್ಲಿ ಉತ್ತಮ ಆಡಳಿತ ನಡೆಸುವ ಗುರಿ ಹೊಂದಿರುವ ಡಿಕೆಶಿ, ಇದೀಗ ರಾಜ್ಯದಲ್ಲಿ ಯುವಕರು ಸಿಹಿ ಸುದ್ದಿ ನೀಡಿದೆ ಉದ್ಯೋಗಾವಕಾಶ (ಎಂಥ ಠಠಿ-ಠಿಂಡಿಣಣಟುಣಥಿ) ಹೆಚ್ಚಿಸಲು ಮತ್ತು ಗ್ರಾಮೀಣ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ರಾಜ್ಯ ಸರ್ಕಾರ (ಅಠಟಿಂಡಿಝ ಉಠಿತಜಡಿಟಿಟಜಟಿಣ) ಮಹತ್ವದ ನಿರ್ಧಾರ ತೆಗೆದುಕೊಂಡಿದೆ.ಉದ್ಯೋಗ ವಿನಿಮಯ ಕೇಂದ್ರ ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ಬಗ್ಗೆ ಮಾತಾಡಿದ ಸಿಎಂ ಡಿಕೆ ಶಿವಕುಮಾರ್ ಅವರು, ಭಾರತದಲ್ಲೇ ಪ್ರಥಮವಾದ ಖಾಸಗಿ ಉದ್ಯೋಗ ವಿನಿಮಯ ಕೇಂದ್ರದ ಸ್ಥಾಪನೆ ಮಾಡೋದಾಗಿ ತಿಳಿಸಿದ್ದಾರೆ. ಖಾಸಗಿ ವಲಯದಲ್ಲಿ ಉದ್ಯೋಗಾಕಾಂಕ್ಷಿಗಳು ಈ ವೇದಿಕೆಯಲ್ಲಿ ನೋಂದಾಯಿಸಿಕೊಳ್ಳಬಹುದು. ಜೊತೆಗೆ ಉದ್ಯೋಗದಾತ ಕಂಪನಿಗಳು ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ನುರಿತ ಮಾನವ ಸಂಪನ್ಮೂಲವನ್ನು ಇಲ್ಲಿಂದ ಪಡೆದುಕೊಳ್ಳಬಹುದು. ಇದು ಸ್ಥಳೀಯ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಲಿದೆ ಎಂದು ತಿಳಿಸಿದ್ದಾರೆ.ಶಿಕ್ಷಣದಲ್ಲಿ ಗುಣಮಟ್ಟ ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಗುರಿ ಎಂದ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ವಿದ್ಯಾರ್ಥಿಗಳಿಗಾಗಿ ಅನೇಕ ಯೋಜನೆ ತಂದಿದ್ದಾರೆ. ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಹೊಸ ಸಿಎಸ್‌ಆರ್ ನೀತಿಯನ್ನ ಜಾರಿಗೆ ತರಲಾಗುತ್ತಿದೆ. ಸಿಟಿಗಳು ಮತ್ತು ಟೌನ್‌ಗಳಿಗೆ ವಲಸೆ ಹೋಗುವುದನ್ನು ತಡೆಯಲು ಹಳ್ಳಿಗಳಲ್ಲೇ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಗುರಿಯನ್ನು ಹೊಂದಿದ್ದೇವೆ ಎಂದು ಡಿಕೆಶಿ ತಿಳಿಸಿದ್ದಾರೆ. ಯುವಜನರಿಗೆ ಉದ್ಯೋಗ ತರಬೇತಿ ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಡಿ.ಕೆ. ಶಿವಕುಮಾರ್ ಅವರು ರಾಜ್ಯದಲ್ಲಿ ನಿರುದ್ಯೋಗ ನಿವಾರಣೆಗೆ ಹಲವು ಮಹತ್ವದ ಕ್ರಮಗಳನ್ನು ಘೋಷಿಸಿದ್ದಾರೆ. ಉದ್ಯೋಗಾಕಾಂಕ್ಷಿಗಳಿಗೆ ನೆರವಾಗಲು ಹೊಸದಾಗಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ಆರಂಭಿಸುವುದು ಮತ್ತು ಯುವಜನರಿಗೆ ಉದ್ಯೋಗ ತರಬೇತಿ ನೀಡುವುದು ಅವರ ಪ್ರಮುಖ ಯೋಜನೆಗಳಲ್ಲಿ ಸೇರಿವೆ. ಖಾಲಿ ಹುದ್ದೆಗಳ ಭರ್ತಿ: ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಮತ್ತು ಯುವ ವಿದ್ಯಾವಂತರಿಗೆ ಹೆಚ್ಚಿನ ಒತ್ತು ನೀಡಲು ಚಿಂತನೆ ನಡೆಸಲಾಗಿದೆ.



# ಉಚಿತ ತೊಗರಿ ಹಾಗೂ ಉದ್ದು ಬೀಜಗಳ ವಿತರಣೆ : ರೈತರ ಆತ್ಮನಿರ್ಭರತೆಗೆ ಮತ್ತೊಂದು ಹೆಜ್ಜೆ : ಶಾಸಕ ಅಲ್ಲಮಪ್ರಭು ಪಾಟೀಲ್

**ನೈಜ್ಯ ದೆಸೆ ನ್ಯೂಸ್**

ಕಲಬುರಗಿ: ತಾಲೂಕಿನ ರೈತರಿಗೆ ಕೃಷಿ ಇಲಾಖೆಯಿಂದ ಸಿಹಿಸುದ್ದಿ ದೊರೆತಿದ್ದು, 2026-27ನೇ ಸಾಲಿನ ದ್ವಿದಳ ಧಾನ್ಯಗಳ ಆತ್ಮನಿರ್ಭರ ಪಲ್ಸ ಅಭಿಯಾನ ಯೋಜನೆ ಅಡಿಯಲ್ಲಿ ಉಚಿತ ತೊಗರಿ ಹಾಗೂ ಉದ್ದು ಮಿನಿಕೀಟ್ ಬೀಜಗಳ ವಿತರಣಾ ಕಾರ್ಯಕ್ರಮ ಹಾಗೂ ರಾಷ್ಟ್ರೀಯ ಆಹಾರ ಭದ್ರತೆ ಯೋಜನೆ ಅಡಿಯಲ್ಲಿ ತೊಗರಿ ಪ್ರಾತ್ಯಕ್ಷಿಕೆ ಬಿತ್ತನೆ ಬೀಜಗಳ ವಿತರಣೆ ಕಾರ್ಯಕ್ರಮ ಕಲಬುರಗಿ ತಾಲೂಕಿನ ಪಟ್ಟಣ ಗ್ರಾಮದಲ್ಲಿರುವ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಯಿತು.ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಅವರು ರೈತರಿಗೆ ಉಚಿತ ತೊಗರಿ ಹಾಗೂ ಉದ್ದು ಮಿನಿಕೇಟ್ ಪ್ರತ್ಯಕ್ಷಕೆ ಬೀಜಗಳನ್ನು ವಿತರಿಸಿ ಮಾತನಾಡಿದರು. ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೆ ತರುತ್ತಿದ್ದು, ರೈತರು ಅವುಗಳ ಸದುಪಯೋಗ ಪಡೆದುಕೊಂಡು ಎಂದು ಕರೆ ನೀಡಿದರು. ಉತ್ಪಾದನೆ ಹೆಚ್ಚಿಸಿಕೊಳ್ಳಬೇಕು ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆ ಕಲಬುರಗಿ ವತಿಯಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ರೈತರಿಗೆ ಗುಣಮಟ್ಟದತೊಗರಿ ಬೀಜಗಳನ್ನು ವಿತರಿಸಲಾಯಿತು.ದ್ವಿದಳಧಾನ್ಯಗಳ ಉತ್ಪಾದನೆ ಹೆಚ್ಚಿಸುವುದು ಹಾಗೂ ರಾಜ್ಯವನ್ನು ಈ ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿಸುವ ಉದ್ದೇಶದಿಂದ ಆತ್ಮನಿರ್ಭರ ಪಲ್ಸ ಅಭಿಯಾನ ಯೋಜನೆಯನ್ನು ಪರಿಣಾಮಕಾರಿಂತರಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.ರೈತರುವೈಜ್ಞಾನಿಕ ಕೃಷಿಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಉತ್ತಮ ಇಳುವರಿ ಪಡೆಯಲು ಕೃಷಿ ಅನುಸರಿಸಬೇಕು ಎಂದು ಇಲಾಖೆಯ ತಜ್ಞರ ಸಲಹೆಗಳನ್ನು ಕಾರ್ಯಕ್ರಮದಲ್ಲಿ ಮಾರ್ಗದರ್ಶನ ನೀಡಲಾಯಿತು.ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಸಮದ್ ಪಟೇಲ್. ಸಹಾಯಕ ಕೃಷಿ ನಿರ್ದೇಶಕರು ಅರುಣ ಕುಮಾರ ಮೂಲಿಮನಿ ಮುಖಂಡರಾದ ದಶರಥ ಬಾಬು ಒಂಟಿ, ಸಂತೋಷ್ ಪಾಟೀಲ್ ಡನ್ನೂರ್, ಲಿಂಗರಾಜ್ ಕಣ್ಣಿ, ಬಸವರಾಜ್ ಶರಣಪ್ಪ ಜೀವಣಗಿ, ಅಂಬರಾಯ ಸೇರಿದಂತೆ ರೈತರು ಹಾಗೂ ಕೃಷಿ ಇಲಾಖೆ ಯ ಅಧಿಕಾರಿಗಳಾದ ಶ್ರೀದೇವಿ ಹಡೇರಿ, ಅಜಯ ಬಿ.ಶಿವರಾಯ, ಕಾಶಿರಾಯ ಉಪಸ್ಥಿತರಿದ್ದರು."ಉತ್ತಮ ಬೀಜ, ಅಧಿಕ ಇಳುವರಿ" ಎಂಬ ಧ್ಯೆಯದೊಂದಿಗೆ ನಡೆದ ಈ ಕಾರ್ಯಕ್ರಮ ರೈತರಲ್ಲಿ ಹೊಸ ಉತ್ಸಾಹ ಮೂಡಿಸಿತು.



# ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆಗೆ ಮರು ಅರ್ಜಿ ಸಲ್ಲಿಕೆ ವಿಧಾನ

**ನೈಜ್ಯ ದೆಸೆ ನ್ಯೂಸ್**




ಬೆಂಗಳೂರು, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದಗೃಹಲಕ್ಷ್ಮಿ ಹಾಗೂ ಗೃಹಜ್ಯೋತಿ ಯೋಜನೆಗಳಿಗೆ ಸೇವಾ ಸಿಂಧು ಮೂಲಕ ಮರು ಅರ್ಜಿ ಸಲ್ಲಿಸಬಹುದಾಗಿದೆ. ಆಧಾರಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಯ ನೆರವಿನಿಂದ ನೋಂದಣಿ ಮಾಡಬಹುದು.ಗ್ರಾಮ ಒನ್, ಬೆಂಗಳೂರು ಒನ್. ಕರ್ನಾಟಕ ಒನ್ ಹಾಗೂ ನಾಡ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.ಆಧಾರ್ ಕಾರ್ಡ್, ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಪಾಸ್‌ಬುಕ್,ರೇಷನ್ ಕಾರ್ಡ್ (ಪಡಿತರ ಚೀಟಿ) ಸರ್ಕಾರದಿಂದ ಅಧಿಕೃತ ಮಾರ್ಗಸೂಚಿ ಪ್ರಕಟವಾದ ಬಳಿಕ ಮರು ನೋಂದಣಿ ಪ್ರಕ್ರಿಯೆ, ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಪರಿಷ್ಕೃತ ನಿಯಮಗಳ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ.ರಾಜ್ಯಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮೀ ಹಾಗೂಗೃಹಜ್ಯೋತಿ ಯೋಜನೆಗಳನ್ನು ಮತ್ತೊಮ್ಮೆ ಪರಿಷ್ಕರಿಸಲು ಸರ್ಕಾರ ಮುಂದಾಗಿದ್ದು, ಫಲಾನುಭವಿಗಳು ಹೊಸದಾಗಿ ಅರ್ಜಿ ಸಲ್ಲಿಸುವ ವ್ಯವಸ್ಥೆ ಜಾರಿಗೆ ಬರುವ ಸಾಧ್ಯತೆ ಇದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿನ್ನೆ ತಿಳಿಸಿದ್ದರು. ಯೋಜನೆಗಳನ್ನು ಯಾವುದೇ ಕಾರಣಕ್ಕೂಸ್ಥಗಿತಗೊಳಿಸುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಅವರು, ಅರ್ಹ ಫಲಾನುಭವಿಗಳಿಗೆ ಮಾತ್ರ ಸೌಲಭ್ಯ ತಲುಪುವಂತೆ ಮಾಡಲು ಮರು ನೋಂದಣಿ ಪ್ರಕ್ರಿಯೆ ಕೈಗೊಳ್ಳಲಾಗುತ್ತದೆ ಎಂದು ಹೇಳಿದ್ದರು.

# ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಮಕ್ಕಳ ಹಕ್ಕುಗಳ ಪಾಲನೆಗೆ ಸಾರ್ವಜನಿಕರ ಸಹಕಾರ ಅಗತ್ಯ – ನ್ಯಾ.ಮಂಜುಳಾ

**ನೈಜ್ಯ ದೆಸೆ ನ್ಯೂಸ್**

ಲಿಂಗಸುಗೂರು.–ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನ ಬದ್ಧ ಹಕ್ಕುಗಳು ಪ್ರತಿಯೊಬ್ಬರಿಗೂ ದೊರೆಯಬೇಕೆಂಬುದು ಎಲ್ಲರ ಆಶಯವಾಗಿದೆ. ಮಕ್ಕಳ ಹಕ್ಕುಗಳ ಪಾಲನೆಗೂ ಕೂಡ ಸಾರ್ವಜನಿಕರು ಸಹಕಾರ ನೀಡಬೇಕೆಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ ಹೇಳಿದರು. ಪಟ್ಟಣದ ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಅಂಗವಾಗಿ ಕಾನೂನು ಅರಿವು ಜಾಗೃತಿ ಜಾಥಾಕ್ಕೆ ಚಾಲನೆ ನಿಡಿ ಮಾತನಾಡಿದ ಅವರು, ಮಕ್ಕಳ ಹಂತದಲ್ಲಿ ಆಟ ಪಾಠಗಳು ಪ್ರಮುಖ ಪಾತ್ರ ವಹಿಸುತ್ತವೆ. ಮಕ್ಕಳನ್ನು ಶಿಕ್ಷಣವಂತರನ್ನಾಗಿಸದೆ ಕೆಲಸಕ್ಕೆ ಕಳುಹಿಸಿ ಅವರ ಭವಿಷ್ಯ ಹಾಳು ಮಾಡುವುದು ಸರಿಯಲ್ಲ.ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ, ತಾಲೂಕು ಆಡಳಿತ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಕಾರ್ಮಿಕ ಇಲಾಖೆ, ಪುರಸಭೆ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮುಂತಾದ ಕಡೆಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ.ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಇಂತಹ ಮಕ್ಕಳನ್ನು ಗುರುತಿಸಿ ಅವರ ಉಜ್ವಲ ಭವಿಷ್ಯ ರೂಪಿಸುವತ್ತ ಗಮನಹರಿಸಬೇಕೆಂದು ಹೇಳಿದರು.ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಆಚರಿಸುವುದು ಮಕ್ಕಳಿಗೆ ಬಾಲ್ಯ ಶಿಕ್ಷಣ. ಸಂವಿಧಾನದ ಹಕ್ಕುಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದೇ ಇದರ ಉದ್ದೇಶವಾಗಿದೆ.ಪ್ರಸ್ತುತದಿನಮಾನಗಳಲ್ಲಿ ಜೀತ ಮತ್ತು ಬಾಲಕಾರ್ಮಿಕ ಪದ್ಧತಿ ಬದಲಾಗಿದೆ. ಹಿಂದೆ ಶ್ರೀಮಂತರು ತಮ್ಮ ಹೊಲ, ತೋಟ, ಮನೆಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳುತ್ತಿದ್ದರು. ಇದೀಗ ಕಾರ್ಖಾನೆ, ಡಾಬಾ, ಹೋಟೆಲ್, ಕಲ್ಲು ಕ್ವಾರಿ ಸೇರಿದಂತೆ ಈ ಸಂದರ್ಭದಲ್ಲಿ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಅಂಬಣ್ಣಕೆ., ಹೆಚ್ಚುವರಿ ಸಿವಿಲ್ ಮತ್ತು ಜೆ-ಎಂಎಫ್‌ಸಿ ನ್ಯಾಯಾಧೀಶಸಿದ್ದರಾಮರಡ್ಡಿ,ಸ'ರ್ಕಾರಿ ಅಭಿಯೋಜಕ ವಿರುಪಣ್ಣದುಮತಿ, ಬಿಇಓ ಸುಜಾತಾ ಹೂನೂರು. ಪುರಸಭೆ ಮುಖ್ಯಾಧಿಕಾರಿ ನಟರಾಜ, ಕಾರ್ಮಿಕನಿರೀಕ್ಷಕ ಶಾಂತಮೂರ್ತಿ, ಪಿಎಸ್‌ಐ ಚನ್ನಪ್ಪ, ವಕೀಲರಾದ ಶಶಿಧರ ಸೋಮನಾಳ, ಅಮರೇಶ ಕಂದಗಲ್,ಶಿವರಾಜ,ಮಹಾಂತೇಶ ಮರದ್ ಸೇರಿದಂತೆ ಇತರರು ಇದ್ದರು.



## ಸಾಹಿತ್ಯ ಸಿಂಚನ

ಶಾಂತಿ

ಶಾಂತಿ ಎಂಬುದು ಸುಂದರ ಗಾಳಿ,
ಮನದೊಳಗೆ ಬೀಸುವ ಮಧುರ ಲಹರಿ।

ಕೋಪದ ಬೆಂಕಿ ಆರಿಸುವ ನೀರು,
ಪ್ರೀತಿಯ ಮಾತುಗಳ ಅಮೃತ ಧಾರೆ।

ಜಗಳದ ಜಾಲವ ಕತ್ತರಿಸಿ,
ಸ್ನೇಹದ ಸೇತುವೆ ಕಟ್ಟುವ ಶಕ್ತಿ।

ಶಾಂತಿ ಇದ್ದರೆ ಸುಖದ ಜೀವನ,
ನಗುವಿನಿಂದ ತುಂಬುವ ಪ್ರತಿ ಕ್ಷಣ।

ಮಾನವ ಹೃದಯದಲ್ಲಿ ಶಾಂತಿ ನೆಲೆಸಲಿ,
ಭೂಮಿಯೆಲ್ಲೆಡೆ ಪ್ರೀತಿಯ ಬೆಳಕು ಹರಡಲಿ।

– ಹನುಮೇಶ

## ಕಾರುಣ್ಯಾಶ್ರಮದ ಆಶ್ರಯದಾತೆ ಹುಸೇನ್ ಬಿ ಅವರಿಂದ ನೇತ್ರದಾನ ದೇಹ ದಾನ

ನೈಜ್ಯ ದೆಸೆ ನ್ಯೂಸ್



ಸಿಂಧನೂರು –ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಯ ಪಡೆದಿದ್ದ ಹುಸೇನ್ ಬಿ ವಯಸ್ಸು–62 ಇವರು ಅನಾರೋಗ್ಯದಿಂದಾಗಿ ಮರಣ ಹೊಂದಿದ್ದರು. ಇವರಿಗೆ ಯಾರೂ ಇಲ್ಲದ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರ ಪರಿಚಯಸ್ತರ ಒಪ್ಪಿಗೆಯ ಮೇರೆಗೆ ಮತ್ತು ಕಾರುಣ್ಯ ಸಂಸ್ಥೆಯ ಪದಾಧಿಕಾರಿಗಳ ಒಪ್ಪಿಗೆಯೊಂದಿಗೆ ರಾಯಚೂರಿನ ರಿಮ್ಸ್ ಮೆಡಿಕಲ್ ಕಾಲೇಜಿಗೆ ಇವರ ನೇತ್ರ ಮತ್ತು ದೇಹ ದಾನವನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಾವು ಅನಾಥರಾಗಿರಬಹುದು ಆದರೆ ಸಮಾಜ ಅನಾಥವಾಗಬಾರದು ನಮ್ಮ ಕಣ್ಣುಗಳು ಇನ್ನೊಬ್ಬರ ಬಾಳಿಗೆ ಬೆಳಕಾಗಲಿ ಮತ್ತು ದೇಹವು ವೈದ್ಯಕೀಯ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಿ ಎನ್ನುವ ಉದ್ದೇಶದಿಂದ ಈ ತಾಯಿಯ ನೇತ್ರ ಹಾಗೂ ದೇಹ ದಾನ ಮಾಡಲಾಗಿದೆ. ಈ ತಾಯಿಯ ಆತ್ಮಕ್ಕೆ ಆ ಭಗವಂತ ನಿರಂತರ ಆತ್ಮ ಶಾಂತಿಯನ್ನು ಕರುಣಿಸಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ಈ ತಾಯಿಯ ದೇಹವನ್ನು ರಿಮ್ಸ್ ಮೆಡಿಕಲ್ ಕಾಲೇಜಿಗೆ ಒಪ್ಪಿಸಲಾಗಿದೆ. ನಮ್ಮ ಸಂಸ್ಥೆ ಹುಟ್ಟಿದಾಗ ನಿಂದಲೂ ಸಹ ಸಾರ್ವಜನಿಕರಲ್ಲಿಯೂ ಕೂಡ ನೇತ್ರದಾನ ಮತ್ತು ದೇಹ ದಾನದ ಜಾಗೃತಿಗಳನ್ನು ಮಾಡುತ್ತಿರುವುದು ಇಡೀ ನಾಡಿಗೆ ಗೊತ್ತಿರುವಂತಹ ವಿಚಾರ ನಮ್ಮ ಸಂಸ್ಥೆಯೂ ಬರೀ ವೃದ್ಧಾಶ್ರಮ ಹಾಗೂ ಅನಾಥಾಶ್ರಮ ನಡೆಸುವುದಲ್ಲದೆ ಸಮಾಜಕ್ಕೆ ಉಪಯೋಗವಾಗುವಂತಹ ಹಲವಾರು ಅಭಿಯಾನಗಳನ್ನು ಕೂಡ ಹಮ್ಮಿಕೊಳ್ಳುತ್ತಿದ್ದೇವೆ. ನಮ್ಮ ಸಿಂಧನೂರಿನ ಇಬ್ಬರು ಶಾಸಕರುಗಳು ನಮ್ಮ ಸಂಸ್ಥೆಗೆ ಸ್ವಂತ ಜಾಗ ಹಾಗೂ ಅನುದಾನ ಕಲ್ಪಿಸಿಕೊಟ್ಟಲ್ಲಿ ತಾಲೂಕಾಡಳಿತ ಜಿಲ್ಲಾಡಳಿತ ಮತ್ತು ಸರ್ಕಾರದೊಂದಿಗೆ ಕೆಲಸ ಮಾಡುವಂತಹ ಹಲವಾರು ಯೋಜನೆಗಳನ್ನು ಕೂಡ ರೂಪಿಸಿದ್ದೇವೆ. ಈಗಾಗಲೇ ರಿಮ್ಸ್ ಮೆಡಿಕಲ್ ಕಾಲೇಜಿನಲ್ಲಿರುವ ಸಖಿ ಸೆಂಟರ್ ನಲ್ಲಿ ಆಶ್ರಯ ಪಡೆದಿದ್ದ ಹಲವಾರು ಮಹಿಳೆಯರನ್ನು ಕೂಡ ರಕ್ಷಣೆ ಮಾಡಿ ಅಷ್ಟೇ ಕಲ್ಪಿಸುತ್ತಿದ್ದೇವೆ. ಈ ಎಲ್ಲಾ ಸೇವೆಗೆ ಮಹಾದಾನಿಗಳೇ ನಮಗೆ ಬಹುದೊಡ್ಡ ಶಕ್ತಿಯಾಗಿ ನಮ್ಮೆಲ್ಲರಿಗೆ ಬದುಕು ಕಟ್ಟಿಕೊಟ್ಟಿದ್ದಾರೆ. ಮಕ್ಕಳಿಗೆ ಶಿಕ್ಷಣ ಕೊಡಿಸುವ ಪೋಷಕರು ಕೂಡ ನೇತ್ರದಾನ ದೇಹ ದಾನ ಮಾಡಿದರೆ ತಮ್ಮ ಬದುಕು ಸಾರ್ಥಕವಾಗುತ್ತದೆ ಎನ್ನುವ ಆಶಯ ಕಾರುಣ್ಯ ಕುಟುಂಬದ್ದು. ನಮ್ಮ ಈ ಸೇವೆಗೆ ರಿಮ್ಸ್ ಮೆಡಿಕಲ್ ಕಾಲೇಜಿನ ಎಲ್ಲಾ ವಿಭಾಗದ ವೈಜ್ಞಾನಿಕಾ–ರಿಗಳು ಸಹಕರಿಸುತ್ತಿರುವುದು. ಇಂತಹ ಸೇವೆಗೆ ಪ್ರೋತ್ಸಾಹಿಸಿದಂತಾಗಿದೆ ಎಂದು ಮಾತನಾಡಿ ರಿಮ್ಸ್ ಮೆಡಿಕಲ್ ಕಾಲೇಜಿನ ಶವ ವಾಹನಕ್ಕೆ ದೇಹವನ್ನು ಹಸ್ತಾಂತ–ರಿಸಿದರು. ಈ ಸಂದರ್ಭದಲ್ಲಿ ಬೂದಿವಾಳ ಗ್ರಾಮದ ಬಡೇಸಾಬ್ ತಂ.ಮೊಹಮ್ಮದ್ ಸಾಬ್. ಜಲಾಲ್ ತಂ. ಮೊಹಮ್ಮದ್ ಸಾಬ್. ಬಸವರಾಜ ತಂ.ಹನುಮಂತಪ್ಪ ಗುಡಿಹಾಳ. ಹುಸೇನ್ ಬಾಷಾ ತಂ. ಆಲಂ ಸಾಬ್. ಖಾದರ್ ಭಾಷಾ ತಂ.ಹುಸೇನ್ ಸಾಬ್ ಹಾಗೂ ರಿಮ್ಸ್ ಮೆಡಿಕಲ್ ಕಾಲೇಜಿನ ಅಂಗ ರಚನಾ ಶಾಸ್ತ್ರ ವಿಭಾಗದ ಸಿಬ್ಬಂದಿಗಳಾದ ಜಬ್ಬಿ. ವಾಜಿದ್. ಮತ್ತು ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ ಇವರುಗಳು ಉಪಸ್ಥಿತರಿದ್ದರು

## ಕಂಪ್ಲಿ ವಿಧಾನಸಭಾ ಕ್ಷೇತ್ರದ ಕಂಪ್ಲಿ ಮಂಡಲದ ಓ.ಬಿ.ಸಿ. ಮೋರ್ಚಾದ ನೂತನ ಅಧ್ಯಕ್ಷರಾಗಿ ಬಂಡಿ ಜಡೆಪ್ಪ ನೇಮಕ

ನೈಜ್ಯ ದೆಸೆ ನ್ಯೂಸ್




ಬಳ್ಳಾರಿ / ಕಂಪ್ಲಿ : ಭಾರತೀಯ ಜನತಾ ಪಾರ್ಟಿಯ ಕಂಪ್ಲಿ ವಿಧಾನಸಭಾ ಕ್ಷೇತ್ರದ ಕಂಪ್ಲಿ ಮಂಡಲದ ಓ.ಬಿ.ಸಿ. ಮೋರ್ಚಾದ ನೂತನ ಅಧ್ಯಕ್ಷರಾಗಿ ಬಂಡಿ ಜಡೆಪ್ಪ ನೇಮಕಗೊಂಡಿದ್ದಾರೆ. ಬಿಜೆಪಿ ಪಕ್ಷದ ಸಂಘಟನೆಯನ್ನು ಸದೃಢವಾಗಿ ಮತ್ತು ಅತ್ಯಂತ ಬಲಿಷ್ಠವಾಗಿ ಕಟ್ಟಲು ನಿಮ್ಮ ಪರಿಶ್ರಮ ಅತ್ಯವಶ್ಯವಾಗಿದೆ. ಸಂಪೂರ್ಣ ಪಕ್ಷದ ಹಿತದೃಷ್ಟಿಯಿಂದ ಪಕ್ಷದ ಶಿಸ್ತು ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಅವುಗಳನ್ನು ಅಳವಡಿಸಿಕೊಂಡು ಮುಂದಿನ ವರ್ಷದ ಅವಧಿಯಲ್ಲಿ ಪಕ್ಷದ ಸಂಘಟನೆಯತ್ತ ಹೆಚ್ಚಿನ ಗಮನಹರಿಸಿ ಕಾರ್ಯಕರ್ತ–ರಿಗೆ, ಸ್ಫೂರ್ತಿಯಾಗಿ, ಶಕ್ತಿಯಾಗಿ, ರಾಜಕೀಯವಾಗಿ, ಪಕ್ಷದ ಹಿತದೃಷ್ಟಿಯಿಂದ ಪಕ್ಷದ ಒಳಿತಿಗಾಗಿ ಪಕ್ಷದ ಸರ್ವತೋಮುಖ ಅಭಿವೃದ್ಧಿಗೆ ಪ್ರಮಾಣಿಕವಾಗಿ ಕೆಲಸ ನಿರ್ವಹಿಸಬೇಕೆಂದು ಆದೇಶದಲ್ಲಿ ಸೂಚಿಸಲಾಗಿದೆ.ಇಲ್ಲಿನ ಕೊಟ್ಟಾಲ್ ರಸ್ತೆ ಬಳಿಯಲ್ಲಿರುವ ತುಂಗಭದ್ರ ಕಾರ್ಯಾಲಯದಲ್ಲಿ ಮಾಜಿ ಶಾಸಕ ಟಿ.ಎಚ್.ಸುರೇಶಬಾಬು ಅವರು ಆದೇಶ ಪ್ರತಿ ನೀಡಿದರು.ನೂತನ ಅಧ್ಯಕ್ಷ ಬಂಡಿ ಜಡೆಪ್ಪ ಆದೇಶ ಪ್ರತಿ ಸ್ವೀಕರಿಸಿ ಮಾತನಾಡಿ, ಮಾಜಿ ಸಚಿವರಾದ ಬಿ. ಶ್ರೀರಾಮುಲು, ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ. ಜನಾರ್ದನ ರೆಡ್ಡಿ, ಮಾಜಿ ಶಾಸಕ ಸುರೇಶಬಾಬು, ಕಂಪ್ಲಿ ಮಂಡಲ ಅಧ್ಯಕ್ಷ ಸಿ.ಡಿ.ಮಹಾದೇವ ಹಾಗೂ ಎಲ್ಲ ಹಿರಿಯ ಬಿಜೆಪಿ ಮುಖಂಡರಿಗೂ ಅವರು ನಮ್ಮನ್ನು ಗುರುತಿಸಿ, ಕಂಪ್ಲಿ ಮಂಡಲ ಅಧ್ಯಕ್ಷರನ್ನಾಗಿ ನೇಮಕಗೊಳಿಸಿರುವುದಕ್ಕೆ ತುಂಬು ಹೃದಯದ ಕೃತಜ್ಞತೆಗಳನ್ನು ತಿಳಿಸಿದರು.

## ವಿದ್ಯಾರ್ಥಿಗಳು ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಿ : ಆಂಜನೇಯ ನಸಲಾಪುರ

ನೈಜ್ಯ ದೆಸೆ ನ್ಯೂಸ್



ಮಾನ್ವಿ : ಹಾಸ್ಟೆಲ್ ಜೀವನ ಎನ್ನುವುದು ವಿದ್ಯಾರ್ಥಿಗಳಿಗೆ ಸ್ವಾವಲಂಬನೆ ಮತ್ತು ಶಿಸ್ತನ್ನು ವಿದ್ಯಾರ್ಥಿಗಳು ಕಲಿಸುವ ದೊಡ್ಡ ಪಾಠಶಾಲೆ. ಮನೆಯಿಂದ ದೂರವಿದ್ದರೂ ಎಲ್ಲರೂ ಒಂದೇ ಸಮಾಜದ ಉತ್ತಮ ಕುಟುಂಬದಂತೆ ಬಾಳಿ, ಇಂದು ಉನ್ನತ ಶಿಕ್ಷಣ ಮುಗಿಸಿ ಹೊರಡುತ್ತಿರುವ ವಿದ್ಯಾರ್ಥಿಗಳು ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು," ಎಂದು ಆಂಜನೇಯ ನಸಲಾಪುರ ತಿಳಿಸಿದರು.ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ಬಿ.ಎ. ಬಿ.ಕಾಂ ಮತ್ತು ಬಿ.ಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಸಮಾರಂಭ ಹಮ್ಮಿಕೊಳ್ಳಲಾಯಿತು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಇಂದಿನ ಯುವಕರಲ್ಲಿ ನೈತಿಕ ಮೌಲ್ಯಗಳು ಕಾಣದಾಗಿವೆ. ವಿದ್ಯಾರ್ಥಿಗಳಲ್ಲಿ ಶಾಂತಿ ಸೌಹಾರ್ದತೆ, ಭ್ರಾತೃತ್ವ ಮನೋಭಾವನೆಗಳನ್ನು ಬೆಳಸಿಕೊಳ್ಳಬೇಕು ವಸತಿ ನಿಲಯದಲ್ಲಿರುವ ಅನೇಕ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮವಾದ ಜ್ಞಾನವನ್ನು ಪಡೆದು ಕೊಳ್ಳಬೇಕು. ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಕಳೆದ ದಿನಗಳು ಮರೆಯಲಾಗದು.ಇಲ್ಲಿ ಕಲಿತ ಮೌಲ್ಯಗಳು ನಿಮ್ಮ ಭವಿಷ್ಯದ ಸಾಧನೆಗೆ ದಾರಿದೀಪವಾಗಲಿ ಎಂದು ಹೇಳಿದರು.ಮುಖ್ಯ ಅತಿಥಿಗಳಾಗಿ ಆಗಿಮಿಸಿದ ಸಹಾಯಕ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳಾದ ಚಂದ್ರಶೇಖರ ಮಾತನಾಡಿ ವಿದ್ಯಾರ್ಥಿಯ ಜೀವನ ಅತ್ಯಮೂಲ್ಯವಾದದ್ದು ಅದನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡಾಗ ಜೀವನ ಸಾರ್ಥಕವಾಗುತ್ತದೆ. ತಂದೆ ತಾಯಿಗಳ ಕನಸನ್ನ ನನಸು ಮಾಡಬೇಕು. ಸಾಮಾನ್ಯರೇ ಅಸಾಮಾನ್ಯರಾಗಿ ಉನ್ನತವಾದ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಮೂರ್ಖನಿಗಿಂತ ಅತಿ ಮೂರ್ಖನೇ ಮುಂದೆ ಅತಿ ದೊಡ್ಡ ವ್ಯಕ್ತಿಯಾಗಿದ್ದಾರೆ. ಅನೇಕ ಸಾಧಕರ ಜೀವನ ಬಗ್ಗೆ ತಿಳಿಸಿ ವಿದ್ಯಾರ್ಥಿಗಳು ಆದ–ರ್ಶ ವ್ಯಕ್ತಿಗಳ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.ಪ–ರಿಶಿಷ್ಟ ಪಂಗಡದ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳಾದ ಭಾಗಯ್ಯ ನಾಯಕ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿ ಜೀವನದ ಅತ್ಯಂತ ಪ್ರಮುಖ ಘಟ್ಟವನ್ನು ಯಶಸ್ವಿಯಾಗಿ ಮುಗಿಸಿರುವ ನೀವು, ಭವಿಷ್ಯದಲ್ಲಿ ದೇಶದ ಜವಾಬ್ದಾರಿಯುತ ಪ್ರಜೆಗಳಾಗಬೇಕು. ಹಾಸ್ಟೆಲ್ ಅಲ್ಲಿ ಕಲಿತ ಶಿಸ್ತು ಮತ್ತು ಮೌಲ್ಯಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನಾಡಿ ಶುಭ ಹಾರೈಸಿದರು.ಕಾರ್ಯಕ್ರಮದ ಪ್ರಸ್ತಾವಿಕವಾಗಿ ವಸತಿ ನಿಲಯ ಮೇಲ್ವಿಚಾರಾದ ಅಮರೇಶ ಮಾತನಾಡಿ, ಪದವಿ ಮುಗಿಯುವುದು ಶಿಕ್ಷಣದ ಅಂತ್ಯವಲ್ಲ, ಇದು ನಿಮ್ಮ ಮುಂದಿನ ಸಾಧನೆಯ ಹಾದಿಯ ಆರಂಭ. ಕಠಿಣ ಪರಿಶ್ರಮ ಮತ್ತು ಸತತ ಪ್ರಯತ್ನದಿಂದ ಮಾತ್ರ ಯಶಸ್ಸು ಸಾಧ್ಯ ಎಂದು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು. ಇದೇ ಸಂದರ್ಭದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳು ಹಾಸ್ಟೆಲ್ ಅಲ್ಲಿ ಕಳೆದ ತಮ್ಮ ಮಧುರ ನೆನಪುಗಳನ್ನು ಹಂಚಿಕೊಳ್ಳುತ್ತಾ ಭಾವುಕರಾದರು. ಕಿರಿಯ ವಿದ್ಯಾರ್ಥಿಗಳು ತಮ್ಮ ಹಿರಿಯ ಸಹಪಾಠಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ತದನಂತರ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಂಡು ಎಲ್ಲರ ಮನರಂಜಿಸಿದವು.ಕಾರ್ಯಕ್ರಮದಲ್ಲಿ ಹುಸೇನ್ ಬಡಿಗೇರ ವಸತಿ ನಿಲಯ ಮೇಲ್ವಿಚಾರಕರು, ಶ್ರೀನಿವಾಸ್ ವಸತಿ ನಿಲಯ ಮೇಲ್ವಿಚಾರಕರು ಹಾಸ್ಟೆಲ್ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿ ವಿರೇಶ ಕಾರ್ಯಕ್ರಮ ನಿರೂಪಿಸಿದರು, ಶಿವಕುಮಾರ ಸ್ವಾಗತಿಸಿದರು ರಂಗನಾಥ ವಂದಿಸಿದರು.

## ಬಿಈಡಿ ಸೆಮಿಸ್ಟರ್ ಪರೀಕ್ಷೆ: ಶೇ.100 ಫಲಿತಾಂಶ

ನೈಜ್ಯ ದೆಸೆ ನ್ಯೂಸ್





ತಾಳಿಕೋಟಿ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 2025–2026 ನೇ ಶೈಕ್ಷಣಿಕ ಸಾಲಿನ ಬಿ.ಈಡಿ 3ನೇ ಸೆಮಿಸ್ಟರ್ ಪರೀಕ್ಷಾ ಫಲಿತಾಂಶ ಪ್ರಕಟಿಸಿದ್ದು ಸ್ಥಳೀಯ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಫಲಿತಾಂಶವು 3ನೇ ಸೆಮಿಸ್ಟರ್ 100% ರಷ್ಟು ಫಲಿತಾಂಶ ದಾಖಲಾಗಿದ್ದು. ಕೆಳಕಾಣಿಸಿದ ಪ್ರ–ಶಿಕ್ಷಣಾರ್ಥಿಗಳು ಮಹಾವಿದ್ಯಾಲಯಕ್ಕೆ ಅತಿ ಹೆಚ್ಚು ಅಂಕ ಗಳಿಸಿ ಮಹಾವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿದಕ್ಕಾಗಿ ವೀರಶೈವ ವಿದ್ಯಾವರ್ಧಕ ಸಂಘದ ಚೇರಮನ್ನರು, ವೈಸ್ – ಚೇರಮನ್ನರು, ಕಾರ್ಯದರ್ಶಿಗಳು, ಸಹ–ಕಾರ್ಯದರ್ಶಿಗಳು ಹಾಗೂ ಸಂಘದ ಸರ್ವ ಕಾರ್ಯಕಾರಿಣಿ ಸದಸ್ಯರು ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಚೇರಮನ್ನರು , ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ. 3ನೇ ಸೆಮಿಸ್ಟರ್ ಕ್ರಸಂ ಪ್ರ–ಶಿಕ್ಷಣಾರ್ಥಿಯ ಹೆಸರು ಫಲಿತಾಂಶ ಸ್ಥಾನ 1. ನಿವೇದಿತಾ ಶಿವಾನಂದ ಮಠ 85.66 (514/600) ಪ್ರಥಮ 2.ಅನ್ನಪೂರ್ಣ ಬಡಿಗೇರ 85.50 (513/600) ದ್ವಿತೀಯ 3. ಭಾಗ್ಯವಂತಿ 85.16 (511/600) ತೃತೀಯ ಪಡೆದುಕೊಂಡಿದ್ದಾರೆ.




## "ಏಕಶಿಲಾ ಶಾಸನದ ರಕ್ಷಣೆ ಮರೆತ ಪುರಾತತ್ವ ಇಲಾಖೆಯ ಅಧಿಕಾರಿಗಳು"

### ರಾಯಚೂರಿನ ಕೇಂದ್ರ ಬಸ್ ನಿಲ್ದಾಣ ಸಮೀಪದ ಇಂದಿರಾ ಕ್ಯಾಂಟೀನ್ ಆವರಣದಲ್ಲಿರುವ ಬಂಡೆ ಶಾಸನದ ನೋಟ.

ನೈಜ್ಯ ದೆಸೆ ನ್ಯೂಸ್



ರಾಯಚೂರು –: ಇಲ್ಲಿನ ಕೇಂದ್ರ ಬಸ್ ನಿಲ್ದಾಣ ಸಮೀಪದ ಏಕಶಿಲಾ ಬಂಡೆ ಶಾಸನಕ್ಕೆ ರಕ್ಷಣೆ ಇಲ್ಲದ ಕಾರಣ ಬಂಡೆ ಕಲ್ಲಿನ ಪದರಗಳು ಕಳಚಿ ಬೀಳುತ್ತಿವೆ. ರಾಜ್ಯ ಪುರಾತತ್ವ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ಲಕ್ಷ್ಯದ ಕಾರಣ ಏಕಶಿಲೆಯಲ್ಲಿನ ಶಾಸನ ಹಾಳಾಗಿ ಕಾಲಗರ್ಭ ಸೇರಲಾರಂಭಿಸಿದೆ. ತಹಶೀಲ್ದಾರ್ ಕಚೇರಿ ರಸ್ತೆ ಪಕ್ಕ ಏಕಶಿಲಾ ಶಾಸನದ ಗೋಡೆ ಬದಿಯಲ್ಲಿ ಅನೇಕ ಅಂಗಡಿಗಳಿವೆ. ಬಂಡೆ ಶಾಸನದ ಐದು ಅಡಿ ಅಂತರದಲ್ಲೇ ಇಂದಿರಾ ಕ್ಯಾಂಟೀನ್ ಸಹ ನಿರ್ಮಿಸಲಾಗಿದೆ. ಪುರಾತತ್ವ ಇಲಾಖೆಯ ನಿಯಮ ಹಾಗೂ ಕಾನೂನುಗಳು ಗೊತ್ತಿದ್ದರೂ ಬೇರೆ ಇಲಾಖೆಗಳು ಸ್ಮಾರಕದ ಬಳಿಯೇ ಕಟ್ಟಡ ನಿರ್ಮಿಸಿಕೊಂಡಿವೆ. ಅಧಿಕಾರಿಗಳ ಮೌನ ಸಮ್ಮತಿ ಹಲವು ಅನಾಹುತಗಳಿಗೆ ದಾರಿ ಮಾಡಿಕೊಟ್ಟಿದೆ. ಪುರಾತತ್ವ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯಿಂದ ಒಂದು ಫಲಕವನ್ನೂ ಇಲ್ಲಿ ಅಳವಡಿಸಿಲ್ಲ. ಕೋಟೆ ಅಧ್ಯಯನ ಸಮಿತಿಯೇ ಬಂಡೆ ಶಾಸನದಲ್ಲಿ ಬರೆದಿರುವ ಅಂಶಗಳನ್ನು ಫಲಕದಲ್ಲಿ ಮುದ್ರಿಸಿ ಇಂದಿರಾ ಕ್ಯಾಂಟೀನ್ ಮುಂಭಾಗದಲ್ಲಿ ಅಳವಡಿಸಿದೆ.'ಪುರಾತತ್ವ ಇಲಾಖೆಯ ಅಧಿಕಾರಿಗಳು ಜವಾಬ್ದಾರಿ ವಹಿಸಿ ಕಾರ್ಯನಿರ್ವಹಿಸುತ್ತಿಲ್ಲ. ಇಲಾಖೆಯಲ್ಲಿ ನಿಪುಣ ಸಿಬ್ಬಂದಿಯ ಕೊರತೆ ಇದೆ. ಹೀಗಾಗಿ ನಗರದಲ್ಲಿನ ಸ್ಮಾರಕಗಳು ನಮ್ಮ ಕಣ್ಣೆದುರೇ ಹಾಳಾಗುತ್ತಿವೆ' ಎಂದು ರಾಯಚೂರು ಕೋಟೆ ಅಧ್ಯಯನ ಸಮಿತಿ ಗೌರವಾಧ್ಯಕ್ಷ ಜಯಣ್ಣ ಅಸಮಾಧಾನ ವ್ಯಕ್ತಪಡಿಸುತ್ತಾರೆ.'ಅಪರೂಪದ ಬಂಡೆ ಶಾಸನ ಉಳಿಸಿಕೊಳ್ಳಲು ಪುರಾತತ್ವ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಮಹಾನಗರ ಪಾಲಿಕೆ ಅಧಿಕಾರಿಗಳು ಮುಂದಾಗಬೇಕು. ಶಾಸನಗಳ ಸಂರಕ್ಷಣೆಗೆ ಒತ್ತು ಕೊಡಬೇಕು' ಎಂದು ರಾಯಚೂರು ಕೋಟೆ ಅಧ್ಯಯನ ಸಮಿತಿ ಕಾರ್ಯದರ್ಶಿ ಸೈಯದ್ ಹಫೀಜುಲ್ಲಾ ಮನವಿ ಮಾಡುತ್ತಾರೆ. 'ಪ್ರವಾಸೋದ್ಯಮ ಇಲಾಖೆಯ ಪ್ರವಾಸಿ ಮಿತ್ರ ಯೋಜನೆ ಅಡಿ ಕಾವಲುಗಾರರನ್ನು ಕೊಟ್ಟರೂ ಅವರನ್ನು ಕೋಟೆ ರಕ್ಷಣೆಗೆ ನಿಯೋಜಿಸಲಾಗಿದೆ. ಸಿಬ್ಬಂದಿ ಕೊರತೆ ಇರುವ ಕಾರಣ ಏನೂ ಮಾಡದಂತ ಸ್ಥಿತಿಯಲ್ಲಿದ್ದೇವೆ' ಎಂದು ರಾಜ್ಯ ಪುರಾತತ್ವ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕ್ಯುರೇಟರ್ ಶಿವಪ್ರಕಾಶ ಹೇಳಿದರು. ಏಕಶಿಲಾ ಬಂಡೆ ಶಾಸನದ ವಿಶೇಷತೆಗಳು –: ರಾಯಚೂರು ನಗರದ ಬಸ್ ನಿಲ್ದಾಣ ಸಮೀಪ ಕೋಟೆಯ ಗೋಡೆಯಲ್ಲಿರುವ ದೊಡ್ಡ ಬಂಡೆಯ ಮೇಲಿನ ಶಾಸನ ಐತಿಹಾಸಿಕ ಕಾಕತೀಯರ ಕಾಲದ ಏಕಶಿಲಾ ಶಾಸನವು 42 ಉದ್ದ ಹಾಗೂ 3 ಅಡಿ ಅಗಲದ ಬೃಹತ್ ಕಲ್ಲಿನಲ್ಲಿದೆ. ಕ್ರಿ.ಶ. 1294ರ ನವೆಂಬರ್ 23ರಂದು ರಾಣಿ ರುದ್ರಮ್ಮದೇವಿಯವರ ಮಂತ್ರಿ ಗೋರೆ ಗಂಗಯ ರೆಡ್ಡಿವರ ಆಜ್ಞೆಯ ಮೇರೆಗೆ ಇದನ್ನು ಕೆತ್ತಲಾಗಿದೆ.ಭಾಷೆ ಮತ್ತು ಲಿಪಿ: ಈ ಶಾಸನವು ಕನ್ನಡ ಲಿಪಿಯಲ್ಲಿದ್ದರೂ, ಬಳಸಲಾಗಿರುವ ಭಾಷೆ ತೆಲುಗಾಗಿದೆ. ಆಶಯ: "ಸರ್ವ ರಾಷ್ಟ್ರ ಸಮಸ್ತ ಪ್ರಜಾ ರಕ್ಷಣಾರ್ಥ" (ಎಲ್ಲಾ ರಾಷ್ಟ್ರಗಳ ಮತ್ತು ಜನರ ರಕ್ಷಣೆಗಾಗಿ) ಎಂಬ ಘೋಷಣೆಯೊಂದಿಗೆ ಕೋಟೆಯ ನಿರ್ಮಾಣವನ್ನು ಇದು ಸಾರುತ್ತದೆ. ಇದು ಕಾಕತೀಯರ ಕಾಲದ ಹೆಗ್ಗುರುತಾಗಿದ್ದು, ಅತ್ಯಂತ ದೀರ್ಘವಾದ ಏಕಶಿಲಾ ಶಾಸನವಾಗಿದೆ.ಬಂಡೆ ಶಾಸನದ ಬದಿಯಲ್ಲಿ ಈ ಬೃಹತ್ ಕಲ್ಲನ್ನು ಎತ್ತಿನ ಗಾಡಿಗಳು ಮತ್ತು ಎತ್ತುಗಳನ್ನು ಬಳಸಿ ಗಣಿಯಿಂದ ಕೋಟೆಯವರೆಗೆ ಹೇಗೆ ತರಲಾಯಿತು ಎನ್ನುವುದನ್ನು ಬಿಂಬಿಸುವ ಕೆತ್ತನೆಗಳು ಸಹ ಕಾಣಸಿಗುತ್ತವೆ. ಕೋಟೆ ಪ್ರದೇಶದಲ್ಲಿ ಪರ್ಷಿಯನ್, ಉರ್ದು ಮತ್ತು ಅರೇಬಿಕ್ ಭಾಷೆಗಳಲ್ಲಿ ಬರೆಯಲಾದ ಕಲ್ಲಿನ ಶಾಸನಗಳೂ ಇವೆ.

## "ಮಸ್ಕಿ ಬ್ಲಾಕ್ ಕಾಂಗ್ರೆಸ್ ಒಬಿಸಿ ಅಧ್ಯಕ್ಷರ ನೇಮಕ"




ನೈಜ್ಯ ದೆಸೆ ನ್ಯೂಸ್

ಮಸ್ಕಿ –: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷರಾದ ಮಧು ಬಂಗಾರಪ್ಪ ರವರ ಅನುಮೋದನೆ ಮೇರೆಗೆ ಹಾಗೂ ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷರಾದ ಎ.ವಸಂತ ಕುಮಾರ, ಮಸ್ಕಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಸನಗೌಡ ತುರ್ವಿಹಾಳ್, ರಾಯಚೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಬಸವರಾಜ ಪಾಟೀಲ್ ಇಟಗಿ ಇವರ ಅನುಮೋದನೆ ಮೇರೆಗೆ ಹನುಮೇಶ ತಂದೆ ಹನುಮಂತಪ್ಪ ಇವರನ್ನು ಮಸ್ಕಿ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.ತಾವುಗಳು ಪಕ್ಷದ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಮತ್ತು ಸ್ಥಳೀಯ ನಾಯಕರ ಸಹಯೋಗದಲ್ಲಿ ಹಿಂದುಳಿದ ವರ್ಗಗಳ ವಿಭಾಗದ ಪಕ್ಷದ ಸಂಘಟನೆ ಮತ್ತು ಬಲವರ್ಧನೆಗೆ ತಾವುಗಳು ಕಾರ್ಯೋನ್ಮುಖರಾಗಬೇಕೆಂದು ಸೂಚಿಸಲಾಗಿದೆ. ಈ ದಿಸೆಯಲ್ಲಿ ತಮಗೆ ಹೆಚ್ಚಿನ ಯಶಸ್ಸು ಸಿಗಲೆಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಇತರೆ ಹಿಂದುಳಿದ ವರ್ಗಗಳ ವಿಭಾಗದ ರಾಯಚೂರು ಜಿಲ್ಲಾಧ್ಯಕ್ಷರಾದ ಡಿ.ಕೆ.ಮುರಳಿಯಾದವ ವಕೀಲರು ಹಾರೈಸಿದ್ದಾರೆ.

## ನೇಮಕಾತಿ ಪ್ರಕಟಣೆ

SAIL ನೇಮಕಾತಿ 2026 – ವಿವಿಧ ಯುವ ವೃತ್ತಿಪರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ

ಜೂನ್ 12, 2026 ಖಂಖಐ ನೇಮಕಾತಿ 2026: ವಿವಿಧ ಯುವ ವೃತ್ತಿಪರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಜೂನ್ 2026 ರ ಖಂಖಐ ಅಧಿಕೃತ ಅಧಿಸೂಚನೆಯ ಮೂಲಕ ಯುವ ವೃತ್ತಿಪರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೊಕಾರೊ – ಜಾರ್ಖಂಡ್ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 01-ಜುಲೈ-2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10-06-2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 01-ಜುಲೈ-2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು: ಇಲ್ಲಿ ಕ್ಲಿಕ್ ಮಾಡಿ ಅಧಿಕೃತ ವೆಬ್‌ಸೈಟ್:, ail.co.in

# ಮೆಟ್ರಿಯಲ್ಲಿ ಜರುಗಿದ ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ ಸಾಂಸ್ಕೃತಿಕ ಕಾರ್ಯಕ್ರಮಗಳು

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಮೆಟ್ರಿ ಸ್ನೇಹಜೀವಿ ಸಾಮಾಜಿಕ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಮೆಟ್ರಿ ಗ್ರಾಮದ ಹೊನ್ನಹಳ್ಳಿ ಸಿದ್ದಪ್ಪನವರ ಪಿಎಂಶ್ರೀ ಸರಕಾರಿ ಪ್ರೌಢ ಶಾಲೆ ಆವರಣದಲ್ಲಿ ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಇರುವ ಸಾಂಸ್ಕೃತಿಕ ಕಾರ್ಯಕ್ರಮಗಳು ಜನ-ರಿಗೆ ತಲುಪಿಸುವ ನಿಟ್ಟಿನಲ್ಲಿ ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧನಸಹಾಯ ನೀಡುವುದರ ಮೂಲಕ ಸಂಘ ಸಂಸ್ಥೆಗಳಿಗೆ ನೆರವಾಗುತ್ತದೆ. ಕಲೆ ಸಾಹಿತ್ಯ ಸಂಸ್ಕೃತಿ ಕಡೆ ಮಕ್ಕಳು ಕಲೆಗಳನ್ನು ಬೆಳಸಿಕೊಳ್ಳಬೇಕು ಎಂದರು.ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೊಸಕೋಟೆ ಜಗದೀಶ ಮಾತನಾಡಿ, ಸುಮಾರು ಹತ್ತು ಹದಿನೈದು ವರ್ಷಗಳಿಂದ ನಮ್ಮ ಊರಿನ ಗೌರವಯತ ಕೆ.ಶಂಕರ ಸತತವಾಗಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುತ್ತಿದ್ದಾರೆ ಎಂದರು.ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕಿ ರೇಖಾ ಮಾತನಾಡಿ, ಹಳ್ಳಿಗಳಲ್ಲಿ ಮೊದಲು ಹಲವಾರು ಕಲೆಗಳನ್ನು ನೋಡುತ್ತಿದ್ದೆವು. ಆದರೆ, ಇಂದಿನ ದಿನಗಳಲ್ಲಿ ಕಲೆಗಳು ಕಣ್ಣಿಗೆ ಕಾಣದಂತೆ ಮರೆಯಾಗಿ ಹೋಗುತ್ತಿವೆ. ಇಂದಿನ ಮಕ್ಕಳಿಗೆ ನಾಟಕ, ಸಂಗೀತ, ಮತ್ತು ನೃತ್ಯಗಳಿಗೆ ತಿಳಿಸಿಕೊಡಲು ಮನೆಯಲ್ಲಿ ಕಲೆಯನ್ನು ಪರಿಚಯಿಸುವ ಕೆಲಸ ಮಾಡಬೇಕು ಎಂದರು.ಸ್ನೇಹ ಜೀವಿ ಸಾಮಾಜಿಕ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘದ ಅಧ್ಯಕ್ಷ ನಾಗರಾಜ ಮಾತನಾಡಿದರು.ಕೆ.ಹನುಮಂತ ರೆಡ್ಡಿ ಮತ್ತು ತಂಡದವರು ಕಂಸಾಳೆ ನೃತ್ಯ, ಚಂದ್ರಶೇಖರ ಬಸಾಪುರ, ಪುರುಷೋತ್ತಮ ಡಿ,ಕುರುಬರ ಹೇಮೇಶ್ವರ ಮತ್ತು ತಂಡದವರು ರಂಗಗೀತೆಗಳು ಮತ್ತು ಕುಂಟ ಕುಂಟ ಕುರುವತ್ತಿ ಅನಂತಕುಮಾರ ದೊರೆ ಮತ್ತು ತಂಡದವರು ಸಾಮಾಜಿಕ ನಾಟಕ ನೆರವೇ-ರಿಸಿದರು.ಈ ಸಂದರ್ಭದಲ್ಲಿ ಶಾಲಾ ಎಸ್‌ಡಿ-ಎಂಸಿ ಅಧ್ಯಕ್ಷ ಕಬ್ಬೇರ ಹುಲುಗಪ್ಪ, ಶಾಲಾ ಶಿಕ್ಷಕ ಮಡಿವಾಳಪ್ಪ, ಎಮ್.ಡಿ.ವಿನಾಯಕ, ಕೆ.ಹನುಮಂತ ರೆಡ್ಡಿ, ನೆಣಿಕೆ ಗಿರೀಶ, ಸಿ.ಡಿ.ಚಿನ್ನರಾಜ, ಸ್ನೇಹ ಜೀವಿ ಸಾಮಾಜಿ-ಕ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಕೆ.ಶಂಕರ ಮೆಟ್ರಿ ಸೇರಿದಂತೆ ಅನೇಕರಿದ್ದರು.

# ವಿದ್ಯಾರ್ಥಿಗಳ ಸೈಕಲ್ ಜಾಥಾ ಮೂಲಕ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಜಾಗೃತಿ

ನೈಜ್ಯ ದೆಸೆ ನ್ಯೂಸ್



ಸಿರವಾರ –: ತಾಲೂಕಿನ ಕುರುಕುಂದಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಸೈಕಲ್ ಮೂಲಕ ಜಾಗೃತಿ ಜಾಥಾ ನಡೆಸಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಸಾರ್ವಜನಿಕರಲ್ಲಿ ಅರಿವು, ಮೂಡಿಸಿದರು.ಕಾರ್ಯಕ್ರಮದಲ್ಲಿ ಬಾಲಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳು, ಮಕ್ಕಳ ಶಿಕ್ಷಣದ ಮಹತ್ವ ಹಾಗೂ ಮಕ್ಕಳ ಹಕ್ಕುಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸೈಕಲ್ ಜಾಥಾ ನಡೆಸಿದ ವಿದ್ಯಾರ್ಥಿಗಳು ಬಾಲಕಾರ್ಮಿಕತೆಯನ್ನು ತೊಡೆದುಹಾಕುವ ಸಂದೇಶ ಸಾರಿದರು.ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಪ್ರವೀಣ್, ಸಹ ಶಿಕ್ಷಕರಾದ ಶ್ರೀದೇವಿ, ಅತಿಥಿ ಶಿಕ್ಷಕರಾದ ಶಿವರಾಜ್, ಬಸವರಾಜ್, ಪೊಲೀಸ್ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರಾದ ಸುನೀತಾ ಹಾಗೂ ರತ್ನ, ದೊಡ್ಡಮ್ಮ, ರಂಗಪ್ಪ, ಗ್ರಾಮ ಪಂಚಾಯಿತಿ ಸಿಬ್ಬಂದಿ, ಶಾಲೆಯ ಶಿಕ್ಷಕರು, ಇ ಸಂಸ್ಥೆಯ ಕನ್ಸೆಂಟ್ ಶಶಿಕಲಾ, ಗೀತಾ ಹಾಗೂ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.ಬಾಲಕಾವಿ-ರ್ಕತೆಯನ್ನು ತಡೆಗಟ್ಟಿ ಪ್ರತಿಯೊಂದು ಮಗು ಕೂಡ ಶಿಕ್ಷಣ ಹಾಗೂ ಬಾಲ್ಯ ಜೀವನದಿಂದ ವಂಚಿತ ಆಗದಂತೆ ನೋಡಿಕೊಳ್ಳಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಕಾರ್ಯಕ್ರಮದಲ್ಲಿ ಕರೆ ನೀಡಲಾಯಿತು.

## ಉತ್ತಮ ಮಳೆ, ರೈತರ ಗಿಡ ನೆಟ್ಟು ಪರಿಸರ ದಿನ ಆಚರಣೆ ಮೊಗದಲ್ಲಿ ಮಂದಹಾಸ

ನೈಜ್ಯ ದೆಸೆ ನ್ಯೂಸ್



ಅರಕೇರಾ ಶನಿವಾರ ರಾತ್ರಿ ಸುರಿದ ಉತ್ತಮ ಮಳೆಯಿಂದಾಗಿ ತಾಲ್ಲೂಕಿನ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ನೀರಿನ ಕೊರತೆಯಿಂದಒಣಗತೊಡಗಿದ್ದ ಸಜ್ಜೆ. ತೋಗರಿ ಹತ್ತಿ ಬೆಳೆಗೆ ಮಳೆಯಿಂದ ಜೀವಜಲ ಸಿಕ್ಕಂತಾಗಿದೆ.ರೈತರು ಜಮೀನಿನಲ್ಲಿ ಬೆಳದ ಬೆಳೆಗಳನ್ನು ಉಳಿಸಿಕೊಳ್ಳಲು ಬೋರವೆಲ್ಡ್ ಪಂಪ್‌ಸೆಟ್ಟು ಅನಿವಾರ್ಯತೆ ಸೃಷ್ಟಿಯಾಗಿತ್ತು. ಗಳಿಂದ ನೀರು ಒದಗಿಸಬೇಕಾದ ಹಲವೆಡೆಬೋರ್‌ವೆಲ್‌ಗಳಲ್ಲಿ ನೀರು ಬತ್ತಿ ಹೋಗಿವೆ ಸಣ್ಣ ಮತ್ತು ಮಧ್ಯಮವರ್ಗದ ರೈತರು ಆರ್ಥಿಕ ಸಂಕಷ್ಟದಿಂದತಮ್ಮತೋಟದಲ್ಲಿ ಹಾಗೂ ಜಮೀನಿನಲ್ಲಿ ಪಂಪ್‌ಸೆಟ್ಟುಗಳಿಂದ ನೀರು ಹಾಯಿಸಲು ಸರಿಯಾದ ಸಮಯದಲ್ಲಿ ವಿದ್ಯುತ್ ಪೋರಕೆ ಸರಬರಾಜು ಕಡಿತದಿಂದಾ ನೀರು ಒದಗಿಸುವುದನ್ನೇ ಕೈಬಿಟ್ಟಿದ್ದರು. ಶನಿವಾರ ಸುರಿದ ಮಳೆಯಿಂದಾಗಿ ರೈತರು ಸಂತಸಗೊಂಡಿದ್ದಾರೆ. ತುಮಕೂರು, ಜೂ. 14– ನಗರದ ಬಟವಾಡಿ ಕುಂಚಶ್ರೀ ಮಹಿಳಾ ಬಳಗದ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಬಟವಾಡಿಯಲ್ಲಿರುವ ಶ್ರೀರಂಗ ವಿದ್ಯಾ ಮಂದಿರದ ಆವರಣದಲ್ಲಿ ಗಿಡಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಮಹಿಳಾ ಬಳಗದ ಸದಸ್ಯರುಗಳು ನಾವು ಯಾವುದೇ ಕಾರಣ-ಕ್ಕೂ ಪರಿಸರಕ್ಕೆ ಹಾನಿ ಮಾಡುವುದಿಲ್ಲ, ನಮ್ಮಿಂದ ಸಾಧ್ಯವಾದಷ್ಟು ಗಿಡ ಮರಗಳನ್ನು ಬೆಳೆಸುತ್ತೇವೆಯೇ ಹೊರತು ಗಿಡ ಮರಗಳನ್ನು ನಾಶ ಮಾಡುವುದಿಲ್ಲ. ಜೀವ ಜಲವಾದ ನೀರನ್ನು ಹಿತಮಿತವಾಗಿ ಬಳಸುತ್ತೇವೆ. ಪ್ಲಾಸ್ಟಿಕ್‌ನ್ನು ಅನಿವಾರ್ಯವಿದ್ದಲ್ಲಿ ಮಾತ್ರ ಬಳಸುತ್ತೇವೆ. ಪರಿಸರವನ್ನು ಕಾಪಾಡಲು ಶ್ರಮಿಸುತ್ತೇವೆ ಎಂದು ಸ್ವಯಂಪ್ರೇರಿತರಾಗಿ ಮಹಿಳೆಯರು ಪ್ರತಿಜ್ಞೆ ಮಾಡಿದರು ಕಾರ್ಯಕ್ರಮದಲ್ಲಿ ಕುಂಚಶ್ರೀ ಮಹಿಳಾ ಬಳಗದ ಅಧ್ಯಕ್ಷೆ ಲಲಿತಾ ಮಲ್ಲಪ್ಪ, ಪದಾಧಿಕಾರಿ ಪ್ರೇಮ ರಮೇಶ್, ಶಿಕ್ಷಕಿಂ-ಯರಾದ ದಾಕ್ಷಾಯಿಣಿ, ಸುಧಾ ಸೇರಿದಂತೆ ಮಹಿಳಾ ಬಳಗದ ಮಂಜುಳಾ, ವನಜಾಕ್ಷಿ, ತನುಜ, ನಿರ್ಮಲ, ಹೇಮಾ, ಗೌರಮ್ಮ, ವಿಜಯಲಕ್ಷ್ಮಿ, ರತ್ನ ಮತ್ತಿತರರು ಭಾಗವಹಿಸಿದ್ದರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸಿದ್ದಾರ್ಥ ಮಾಧ್ಯಮ ಅಧ್ಯಯನ ಕೇಂದ್ರ–ಆದಿಚುಂಚನಗಿರಿ ವಿವಿ ಪರಸ್ಪರ ಒಡಂಬಡಿಕೆ

ನೈಜ್ಯ ದೆಸೆ ನ್ಯೂಸ್




ತುಮಕೂರು – ಪದವಿ ಹಂತದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಾಂಸ್ಕೃತಿ-ಕ ವಿನಿಮಯದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿಜಾರಿಗೊಳಿಸಲು ಮತ್ತು ಇನ್ನಷ್ಟು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸಂವಹನ ಕೌಶಲ್ಯ ಆಧಾರಿತ ತರಬೇತಿ, ಶಿಕ್ಷಣ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ತತ್ವದಡಿಯಲ್ಲಿ ಕೆಲಸ ಮಾಡಲು ತುಮಕೂರಿನ ಶ್ರೀ ಸಿದ್ದಾಥ-ರ್ಗ ಮಾಧ್ಯಮ ಅಧ್ಯಯನ ಕೇಂದ್ರದೊಂದಿಗೆ ಆದಿಚುಂಚನಗಿರಿ ವಿಶ್ವವಿದ್ಯಾಲಯ ಪರಸ್ಪರ ಜಂಟಿ ಒಡಂಬಡಿಕೆ ಮಾಡಿಕೊಂಡಿವೆ. ನಗರದ ಎಸ್‌ಎಸ್‌ಐಟಿ ಸಭಾಂಗಣದಲ್ಲಿ ನಡೆದ ಮಾತುಕತೆಯಲ್ಲಿ ಶ್ರೀ ಸಿದ್ದಾಥ-ರ್ಗ ಮಾಧ್ಯಮ ಅಧ್ಯಯನ ಕೇಂದ್ರ ಮತ್ತು ಆದಿಚುಂಚನಗಿರಿ ವಿಶ್ವವಿದ್ಯಾಲಯ ಶೈಕ್ಷಣಿಕ ಪ್ರತಿನಿಧಿಗಳ ಜಂಟಿ ಸಭೆಯಲ್ಲಿ ಇನ್ನು ಮುಂದೆ ಎರಡು ಸಂಸ್ಥೆಗಳು ಶೈಕ್ಷಣಿಕ ಕ್ಷೇತ್ರದ ಸಹಕಾರ ಸಂಬಂಧಗಳನ್ನು ಔಪಚಾರಿಕಗೊಳಿಸಲು ಮತ್ತು ವೇಗಗೊಳಿಸಿಕೊಳ್ಳುವ ಸಂಬಂಧ ಚರ್ಚಿಸಿದವು. ಎರಡುವಿವಿಗಳನಡುವಿನ ಸಹಕಾರವನ್ನು ಪ್ರೋತ್ಸಾಹಿಸುವುದು ಮತ್ತುಬೆಂಬಲಿಸುವುದುಮತ್ತುಎಲ್ಲ ಕ್ಷೇತ್ರಗಳಲ್ಲಿ ಎರಡೂ ಸಂಸ್ಥೆಗಳಿಂದ ಶೈಕ್ಷಣಿಕವಾಗಿ ಪ್ರಯೋಜನಕಾರಿ ಯೋಜನೆಗಳನ್ನು ಜಾರಿಗೆ ತರಲು ಬದ್ಧವಾಗಿರಲುತೀರ್ಮಾನಿಸಲಾಯಿತು. ಸಭೆಯ ಬಳಿಕ ಅದಿಚುಂಚಂಗಿರಿ ವಿಶ್ವವಿದ್ಯಾಲಯದ ಬಿ ಜಿ ನಗರದ ಪ್ರಥ-ಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ರೋಹಿತ್ ಎನ್.ಆರ್. ಮತ್ತು ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಬಿ ಟಿ ಮುದ್ದೇಶ ಅವರು ಪರಸ್ಪರ ಒಡಂಬಡಿಕೆ ಪತ್ರಗಳಿಗೆ ಸಹಿ ಮಾಡಿ, ವಿನಿಮಯ ಮಾಡಿಕೊಂಡರು. ಸಂವಹನ ಕೌಶಲ್ಯ ಆಧಾರಿತತರಬೇತಿ, ಶಿಕ್ಷಣ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಪರಸ್ಪರ ಸಹಕಾರದ ಮೇಲೆ ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಲು ಎರಡು ಸಂಸ್ಥೆಗಳು ಉದ್ದೇಶಿಸಿವೆ.ವಿದ್ಯಾರ್ಥಿಗಳ ವಿನಿಮಯ, ಜಂಟಿ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿ-ಕೆಗಳ ವಿಸ್ತರಣೆ, ಶೈಕ್ಷಣಿಕ ಪಠ್ಯ ಮತ್ತು ಶೈಕ್ಷಣಿಕ ಪ್ರಕಟಣೆಗಳ ವಿನಿಮಯಮಾಡಿಕೊಳ್ಳುವಮೂಲಕ ತುಮಕೂರಿನಂತಹ ಎರಡನೆ ಹಂತದ ನಗರದಲ್ಲೂ ರಾಷ್ಟ್ರೀಯ ಮಟ್ಟದ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡಬಹುದು-ಎಂಬುದು ಸಾಬೀತಾಗಿದೆ ಎಂದು ಡಾ. ರೋಹಿತ್ ಎನ್ ಆರ್. ಹರ್ಷ ವ್ಯಕ್ತಡಿಸಿದರು. ಸೆಮಿನಾರ್ಗಗಳು, ಜಂಟಿಸಮ್ಮೇಳನಗಳು ಮತ್ತು ಶೈಕ್ಷಣಿಕ ಸಭೆಗಳಲ್ಲಿ ಪರಸ್ಪರ ಭಾಗವಹಿಸುವಿಕೆ, ಅಧ್ಯಾಪಕರುಮತ್ತು ಸಿಬ್ಬಂದಿಗಳ ವಿನಿಮಯ ಸೇರಿದಂತೆ ಹತ್ತು ಹಲವು ಯೋಜನೆಗಳ ಜಾರಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಉದ್ಯೋಗ ಮತ್ತು ಕೈಗಾರಿಕಾ ವಲಯಕ್ಕೆ ಬೇಕಾದ ಕೋರ್ಸ್‌ಗಳ ಶಿಕ್ಷಣ ಮತ್ತು ತರಬೇತಿ ನೀಡಲು ಈ ಒಪ್ಪಂದ ಸಹಕಾರಿಯಾಗಲಿದೆ ಎಂದು ಅವರು ಹೇಳಿದರು.ಸಂಶೋಧನಾ ಯೋಜನೆಗಳು ಮತ್ತು ಪ್ರಕಟಣೆಗಳ ಕುರಿತು ಸಹಯೋಗಗಳು, ಅನ್‌ಲೈನ್ ಕಲಿಕೆ ಮತ್ತು ವೆಬಿನಾರ್‌ಳ ಸಂಘಟನೆಯಲ್ಲಿ ಸಹಕಾರ,ಜಂಟಿ ಸಾಂಸ್ಕೃತಿ-ಕ ಚಟುವಟಿಕೆಗಳನ್ನು ಆಯೋಜಿಸುವುದು, ಮಾಧ್ಯಮ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಸಹಯೋಗ ಕಾರ್ಯಕ್ರಮಗಳು, ಆನ್‌ಲೈನ್ ಕಲಿಕೆ ಮತ್ತುವೆಬಿನಾರ್‌ಗಳ ಸಂಘಟನೆಯಲ್ಲಿ ಸಹಕಾರದೊಂದಿಗೆ ಜಂಟಿ ಸಾಂಸ್ಕೃತಿ-ಕ ಚಟುವಟಿಕೆಗಳನ್ನು ಆಯೋಜಿಸುವುದು ಒಡಂಬಡಿಕೆಯ ಮೂಲ ಉದ್ದೇಶವಾಗಿದೆ ಎಂದು ಡಾ. ರೋಹಿತ್ ಎನ್. ಆರ್. ಹೇಳಿದರು.ಒಪ್ಪಂದದ ನಂತರ ಮಾತನಾಡಿದ ಶ್ರೀಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ, ನಿರ್ದೇಶಕ ಡಾ. ಬಿ ಮುದ್ದೇಶ್, ವಿದ್ಯಾರ್ಥಿ ಮತ್ತು ಅಧ್ಯಾಪಕರ ಮಟ್ಟದಲ್ಲಿ ಸಹಯೋಗದ ಕಲಿಕೆಯ ಕ್ರಮಗಳು, ಸಿದ್ಧಾರ್ಥ ರೇಡಿಯೋದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಂಶೋಧನಾ ಯೋಜನೆಗಳನ್ನು ಜಾರಿಯಿಂದ ರಾಷ್ಟ್ರ ಮಟ್ಟದಲ್ಲಿ ಪೈಪೋಟಿಯನ್ನು ಎದ-ರಿಸಲು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕೋರ್ಸ್ ಗೆ ಸಂಬಂಧಿಸಿದ ಶೈಕ್ಷಣಿಕ ವಸ್ತುಗಳ ವಿನಿಮಯ ಮತ್ತು ಜಂಟಿ ಶೈಕ್ಷಣಿಕ ಸಂಶೋಧನಾ ಯೋಜನೆಗಳ ಪರಿಣಾಮವಾಗಿ ಶೈಕ್ಷಣಿಕ ಸಂಶೋಧನೆಗಳ ಪ್ರಕಟಣೆಗಳಿಗೆ ಒತ್ತು ನೀಡುವುದರಿಂದ ವಿದ್ಯಾರ್ಥಿಗಳ ಗ್ರಹಿಕೆ ಮಟ್ಟವನ್ನು ಹೆಚ್ಚಿಸಬಹುದು ಎಂದು ಅಭಿಪ್ರಾಯಪಟ್ಟರು. ಎರಡೂ ಸಂಸ್ಥೆಗಳು ಪರಸ್ಪರ ಸಂಪರ್ಕವನ್ನು ಕಲ್ಪಿಸಿಕೊಂಡಿರುವುದರಿಂದ ಜಂಟಿ ಸೆಮಿನಾರ್‌ಗಳು, ಸಮ್ಮೇಳನಗಳು, ಕಾರ್ಯಾಗಾರಗಳನ್ನು ಆಯೋಜಿಸಿ, ಅವುಗಳ ಸದುಪಯೋಗವನ್ನು ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಿಗೆ ಸಿಗುವಂತೆ ಮಾಡುತ್ತವೆ.ಸಾಧ್ಯವಾದರೆ ಅಧ್ಯಾಪಕರು ಮತ್ತು ಸಿಬ್ಬಂದಿ ಪರಸ್ಪರ ವಿನಿಮಯವು ಎರಡೂ ಸಂಸ್ಥೆಗಳಲ್ಲಿ ಮಾಡಿಕೊಳ್ಳಲಾಗುವುದು. ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ವರ್ಚುವಲ್ ಉಪನ್ಯಾಸಗಳನ್ನು ಮತ್ತು ವರ್ಚುವಲ್ ಇಂಟ-ರ್ನ್ ಶಿಪ್‌ಗಳು, ಪ್ರಾಜೆಕ್ಟ್ ಪ್ರದರ್ಶನಚಟುವಟಿ-ಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ವಿವ-ರಿಸಿದರು.ಈ ಸಂದರ್ಭದಲ್ಲಿ ಆದಿಚುಂಚನಗಿರಿ ವಿಶ್ವವಿದ್ಯಾಲಯ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಶ್ವೇತಾರಾಣಿ ಎಚ್,ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಜ್ಯೋತಿ ಸಿ., ಶ್ವೇತಾ ಎಂ.ಪಿ.. ಸಿದ್ಧಾರ್ಥ ರೇಡಿಯೋದ ಸಿಬ್ಬಂದಿ ಮತ್ತಿತರರು ಉಪಸ್ಥಿತರಿದ್ದರು.

# ಬರೋಬ್ಬರಿ 39 ವರ್ಷ BJPಗೆ ಅಂಟಿಕೊಂಡಿದ್ದ 2 ನಟರು ಇದೀಗ ವಿಜಯ್ TVKಗೆ ಜಂಪ್!

ನೈಜ್ಯ ದೆಸೆ ನ್ಯೂಸ್



ಚೆನ್ನೈ: ತಮಿಳುನಾಡು ರಾಜಕೀಯ ಅಖಾಡದಲ್ಲಿ ಈಗ ಎಲ್ಲಿ ನೋಡಿದರೂ 'ದಳಪತಿ' ವಿಜಯ್ (Vijay Joseph) ಅವರ "ತಮಿಳಗ ವೆಟ್ರಿ ಕಳಗಂ" (TVK) ಪಕ್ಷದದ್ದೇ ಚರ್ಚೆ.ಸಿನಿಮಾ ಪರದೆಯ ಮೇಲೆ ಮಿಂಚುತ್ತಿದ್ದ ವಿಜಯ್ ಈಗ ರಾಜಕೀಯದ ರಂಗಸ್ಥಳದಲ್ಲೂ ಘಟಾನುಘಟಿ ನಾಯಕರಿಗೆ ನಡುಕ ಹುಟ್ಟಿಸುತ್ತಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ, ಇತರ ಪಕ್ಷಗಳ ಪ್ರಮುಖ ನಾಯಕರು ಹಾಗೂ ಸಿನಿಮಾ ತಾರೆಯರು ಸಾಲು ಸಾಲಾಗಿ ವಿಜಯ್ ಅವರ ಕೈ ಹಿಡಿಯುತ್ತಿದ್ದಾರೆ. ಇದೀಗ ಅಚ್ಚರಿಯ ಬೆಳವಣಿಗೆಯೊಂದರಲ್ಲಿ, ಬರೋಬ್ಬರಿ 39 ವರ್ಷಗಳ ಕಾಲ ಬಿಜೆಪಿಯಲ್ಲಿದ್ದ ಖ್ಯಾತ ನಟ-ರೊಬ್ಬರು ಕಮಲ ತೊರೆದು ವಿಜಯ್ ಸೈನ್ಯ ಸೇರಿಕೊಂಡಿದ್ದಾರೆ!39 ವರ್ಷಗಳ ನಿಷ್ಠೆಗೆ ಸಿಗದ ಬೆಲೆ: ಬಿಜೆಪಿಗೆ ಬಿಗ್ ಶಾಕ್! ತಮಿಳು ಚಿತ್ರರಂಗದ ಖ್ಯಾತ ಪೋಷಕ ನಟ ಪಾಂಡಿ ರವಿ ಅವರು ಬಿಜೆಪಿ ತೊರೆದು ಟಿವಿಕೆ ಸೇರ್ಪಡೆಯಾಗಿರುವುದು ಈಗ ಕಾಲಿವುಡ್ ಮತ್ತು ರಾಜಕೀಯ ವಲಯದಲ್ಲಿ ಹಾಟ್ ಟಾಪಿಕ್ ಆಗಿದೆ. ಪಾಂಡಿ ರವಿ ಅವರು ಸಾಮಾನ್ಯ ನಟನಲ್ಲ, 1987 ರಿಂದ ಅಂದರೆ ಕಳೆದ 39 ವರ್ಷಗಳಿಂದ ಬಿಜೆಪಿಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದರು. "ನನ್ನನ್ನು ಪಾಂಡಿಚೇರಿಯ 10 ಲಕ್ಷ ಜನರಲ್ಲಿ 8 ಲಕ್ಷ ಜನ ಗುರುತಿಸುತ್ತಾರೆ. ಆದರೆ ಬಿಜೆಪಿ ನನ್ನ ಶಕ್ತಿಯನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ. ಇಷ್ಟು ವರ್ಷಗಳ ಕಾಲ ದುಡಿದರೂ ನನಗೆ ಸೂಕ್ತ ಮನ್ನಣೆ ಸಿಗಲಿಲ್ಲ" ಎಂಬ ನೋವಿನೊಂದಿಗೆ ಅವರು ಕೇಸರಿ ಪಡೆಗೆ ಗುಡ್ ಬೈ ಹೇಳಿ ವಿಜಯ್ ಸಾರಥ್ಯದ ಟಿವಿಕೆಗೆ ಜೈ ಎಂದಿದ್ದಾರೆ.ವಿಜಯ್ ಚಿತ್ರಗಳಲ್ಲೇ ಮಿಂಚಿದ್ದ ಪಾಂಡಿ ರವಿ: ಪಾಂಡಿ ರವಿ ಅವರು ವಿಜಯ್ ಅವರ ಆಪ್ತ ವಲಯದ ನಟ ಕೂಡ ಹೌದು. ವಿಜಯ್ ಅವರ ಬ್ಲಾಕ್‌ಬಸ್ಟರ್ ಚಿತ್ರಗಳಾದ 'ಗಿಲ್ಲಿ' ಮತ್ತು 'ಜಿಲ್ಲಾ' ಸೇರಿದಂತೆ ಹಲವು ಸಿನಿಮಾಗಳಲ್ಲಿ ಇವರು ಪೊಲೀಸ್ ಅಧಿಕಾರಿಯ ಪಾತ್ರಗಳಲ್ಲಿ ಮಿಂಚಿದ್ದಾರೆ. ಕೇವಲ ಬೆಳ್ಳಿ ಪರದೆಯಲ್ಲಷ್ಟೇ ಅಲ್ಲದೆ, ಕಿರುತೆರೆಯಲ್ಲೂ ಇವರು ಫೇಮಸ್. ವಿಜಯ್ ಟಿವಿಯ ಖ್ಯಾತ ಧಾರಾವಾಹಿ 'ಪಾಂಡ್ಯನ್ ಸ್ಟೋರ್ಸ್' ಮೂಲಕ ಇವರು ಮನೆಮಾತಾಗಿದ್ದಾರೆ. ಛಾಯಾಗ್ರಾಹಕರಾಗಿ ಸಿನಿಮಾ ಜಗತ್ತಿಗೆ ಕಾಲಿಟ್ಟ ಇವರು ಈಗ ರಾಜಕೀಯದಲ್ಲಿ ದಳಪತಿ ವಿಜಯ್ ಅವರ ಬಲವರ್ಧನೆಗೆ ನಿಂತಿದ್ದಾರೆ.ಸಾಲಾಗಿ ಸೇರುತ್ತಿರುವ ಗಣ್ಯರು:ಪಾಂಡಿ ರವಿ ಮಾತ್ರವಲ್ಲದೆ, ತಮಿಳು ಚಿತ್ರರಂಗದ ಖ್ಯಾತ ಹಾಸ್ಯ ನಟ ಡಿ.ಎಸ್.ಆರ್. ಶ್ರೀನಿವಾಸನ್ ಕೂಡ ಪಣಯೂರಿನಲ್ಲಿ ನಡೆದ ಸಮಾರಂಭದಲ್ಲಿ ಅಧಿಕೃತವಾಗಿ ಟಿವಿಕೆ ಸೇರ್ಪಡೆಗೊಂಡಿದ್ದಾರೆ. ಇವರ ಜೊತೆಗೆ ಮಾಜಿ ಶಾಸಕಿ ವಿಜಯಧರಣಿ ಅವರ ಎಂಟ್ರಿ ಕೂಡ ಭಾರೀ ಚರ್ಚೆಗೆ ಕಾರಣವಾಗಿದೆ. ಕಾಂಗ್ರೆಸ್‌ನಲ್ಲಿ ದೀರ್ಘಕಾಲವಿದ್ದ ವಿಜಯಧರಣಿ, ನಂತರ ಬಿಜೆಪಿ ಸೇರಿದ್ದರು. ಆದರೆ ಅಲ್ಲಿಯೂ ಅಸಮಾಧಾನಗೊಂಡು ಈಗ ವಿಜಯ್ ಅವರ ಸಿದ್ಧಾಂತಕ್ಕೆ ಮಾರುಹೋಗಿ ಟಿವಿಕೆ ಸೇ-ರಿದ್ದಾರೆ.ಮುಂದಿನ ವಿಧಾನಸಭಾ ಚುನಾವಣೆಯೇ ಟಾರ್ಗೆಟ್:- ಈಗಾಗಲೇ ಎಐಎಡಿಎಂಕೆ ಮಾಜಿ ಸಚಿವರಾದ ಕಡಂಬೂರ್ ರಾಜು ಮತ್ತು ಉಡುಮಲೈ ರಾಧಾಕೃಷ್ಣನ್ ಅವರಂತಹ ಪ್ರಭಾವಿ ನಾಯಕರು ವಿಜಯ್ ಪಕ್ಷದತ್ತ ಒಲವು ತೋರುತ್ತಿರುವುದು ತಮಿಳುನಾಡು ರಾಜಕೀಯದಲ್ಲಿ ದೊಡ್ಡ ಬದಲಾವಣೆಯ ಮುನ್ಸೂಚನೆ ನೀಡಿದೆ. ಒಟ್ಟಿನಲ್ಲಿ, ಸಿನಿಮಾ ಸ್ಟೈಲ್‌ನಲ್ಲಿಯೇ ವಿಜಯ್ ಅವರು ಇತರ ಪಕ್ಷಗಳ ವಿಕೆಟ್ ಉರುಳಿಸುತ್ತಿದ್ದು, 2026ರ ವಿಧಾನಸಭಾ ಚುನಾವಣೆಯಲ್ಲಿ ದಳಪತಿಯ ಆರ್ಭಟ ಹೇಗಿರಲಿದೆ ಎಂಬುದನ್ನು ಕಾದು ನೋಡಬೇಕಿದೆ. ಇಡೀ ತಮಿಳುನಾಡು ಈಗ 'ದಳಪತಿ' ಮ್ಯಾಜಿಕ್ ನಿರೀಕ್ಷೆಯಲ್ಲಿದೆ!

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಡ್ರೈವರ್ ಕಮ್ ಮೆಕ್ಯಾನಿಕ್

ಆರು ತಿಂಗಳ 'ಡ್ರೈವರ್ ಕಮ್ ಮೆಕ್ಯಾನಿಕ್ (LMV)' ತರಬೇತಿ ಅವಧಿಯಲ್ಲಿ ಅಭ್ಯರ್ಥಿಗೆ ಉದ್ಯೋಗದ ಪಾತ್ರಕ್ಕೆ ಸಂಬಂಧಿಸಿದ ವೃತ್ತಿಪರ ಕೌಶಲ್ಯ (Professional Skill), ವೃತ್ತಿಪರ ಜ್ಞಾನ (Professional Knowledge) ಹಾಗೂ ಉದ್ಯೋಗಾರ್ಹತಾ ಕೌಶಲ್ಯಗಳು (Employability Skills) ಕುರಿತು ತರಬೇತಿ ನೀಡಲಾಗುತ್ತದೆ. ಇದರ ಜೊತೆಗೆ, ಅಭ್ಯರ್ಥಿಯ ಆತ್ಮವಿಶ್ವಾಸವನ್ನು ವೃದ್ಧಿಸಲು ಯೋಜನಾ ಕಾರ್ಯಗಳು (Project Work) ಹಾಗೂ ಪಠ್ಯೇತರ ಚಟುವಟಿಕೆಗಳು (Extra Curricular Activities) ಕೈಗೊಳ್ಳುವ ಜವಾಬ್ದಾರಿಯನ್ನೂ ನೀಡಲಾಗುತ್ತದೆ. ವೃತ್ತಿಪರ ಕೌಶಲ್ಯ ಮತ್ತು ವೃತ್ತಿಪರ ಜ್ಞಾನ ವಿಷಯಗಳ ಅಡಿಯಲ್ಲಿ ಒಳಗೊಂಡಿರುವ ಪ್ರಮುಖ ಅಂಶಗಳು ಕೆಳಗಿನಂತಿವೆ:ಈ ಕೋರ್ಸ್ ಪೂರ್ಣಗೊಳಿಸಿದ ನಂತರ, ತರಬೇತಿಗಾರನು ಲೈಟ್ ಮೋಟಾರ್ ವಾಹನ (LMV) ಅನ್ನು ಸುರಕ್ಷಿತವಾಗಿ ನಿಗದಿತ ಮಾರ್ಗದಲ್ಲಿ ಹಿರಿಯ ಚಾಲಕರ ಸಹಾಯವಿಲ್ಲದೆ ಚಾಲನೆ ಮಾಡುವ ಸಾಮರ್ಥ್ಯ ಹೊಂದುತ್ತಾನೆ.ಅದೇ ರೀತಿ, ವಾಹನದ ಕಾರ್ಯಾಚರಣೆಗೆ ಮುನ್ನ ಅಗತ್ಯ ಪರಿಶೀಲನೆಗಳನ್ನು (Pre-operational Checks) ನಡೆಸಿ ಅದರ ರಸ್ತೆಯೋಗ್ಯತೆ (Road Worthiness) ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ತರಬೇತಿಗಾರನು ಸಾಮಾನ್ಯ ಚಾಲನಾ ಕ್ರಮಗಳನ್ನು (Standard Driving Practices) ಅನುಸರಿಸಿ, ಸಂಚಾರ ನಿಯಮಗಳನ್ನು (Traffic Regulations) ಪಾಲಿಸಿ, ಉತ್ತಮ ರಸ್ತೆ ನಡವಳಿಕೆಯನ್ನು ಕಾಪಾಡುತ್ತಾನೆ. ವಾಹನ ಚಾಲನೆಯ ಜೊತೆಗೆ, ತರಬೇತಿಗಾರನು ವಾಹನದ ಮೂಲಭೂತ ಸರ್ವಿಸಿಂಗ್ (Basic Servicing) ನಡೆಸುವುದು, ಸ್ಟಿಯರಿಂಗ್ ಮತ್ತು ಸಸ್ಪೆನ್ಷನ್ ವ್ಯವಸ್ಥೆಗಳ ಪರಿಶೀಲನೆ ಮಾಡುವುದು, ಮುಂಭಾಗ ಮತ್ತು ಹಿಂಭಾಗದ ಚಕ್ರಗಳು ಹಾಗೂ ಬ್ರೇಕ್‌ಗಳ ಸರ್ವಿಸಿಂಗ್ ಮಾಡುವುದು, ಮತ್ತು ಇಗ್ನಿಷನ್ ಸರ್ಕ್ಯೂಟ್ ಸರಿಯಾಗಿ ಕಾರ್ಯನಿರ್ವಹಿಸುತ್ತಿದೆಯೇ ಎಂಬುದನ್ನು ಪರಿಶೀಲಿಸುವ ಸಾಮರ್ಥ್ಯವನ್ನು ಹೊಂದುತ್ತಾನೆ. ಇದಲ್ಲದೆ, ತರಬೇತಿಗಾರನು ಸ್ಪಷ್ಟವಾಗಿ ಸಂವಹನ ನಡೆಸಲು, ತಾಂತ್ರಿಕ ಇಂಗ್ಲಿಷ್ (Technical English) ಅರ್ಥಮಾಡಿಕೊಳ್ಳಲು, ಪರಿಸರ ಸಂಬಂಧಿತ ವಿಷಯಗಳು, ಸ್ವಯಂ ಅಧ್ಯಯನ (Self-learning) ಹಾಗೂ ಉತ್ಪಾದಕತೆ (Productivity) ಕುರಿತ ಜ್ಞಾನವನ್ನು ಕೂಡ ಪಡೆಯುತ್ತಾನೆ. ವಿದ್ಯಾರ್ಹತೆ 10 ನೇ ತರಗತಿ ಉತ್ತೀರ್ಣ




## ಕಚೇರಿಗಳಲ್ಲಿ ಅಧಿಕಾರಿಗಳ ದೂರವಾಣಿ ಸಂಖ್ಯೆ ಪ್ರದರ್ಶನ ಕಡ್ಡಾಯ: ಒಂದೇ ಜಾತಿಯವರು ಇರುವಂತಿಲ್ಲ : ಸಿಎಂ ಡಿ.ಕೆ. ಶಿವಕುಮಾರ್

◆ ನೈಜ್ಯ ದೆಸೆ ನ್ಯೂಸ್

ಬೆಂಗಳೂರು : ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶಿಸ್ತಿನ ಪಾಠ ಮಾಡಿದ್ದಾರೆ.ವಿಧಾನಸೌಧದಲ್ಲಿ ಹಿರಿಯ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾ–ರಿಗಳೊಂದಿಗೆ ಸಭೆ ನಡೆಸಿದ ಸಿಎಂ, ಎಲ್ಲಾ ಅಧಿಕಾರಿಗಳು ಬೆಳಗೆ 10 ಗಂಟೆಗೆ ಕಚೇ–ರಿಯಲ್ಲಿ ಹಾಜರಿರಬೇಕು.ಜಿಲ್ಲಾ ಕೇಂದ್ರ ಕಚೇ–ರಿಗೆ ಹಾಜರಾಗಿರುವ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಸಂಬಂಧಿಸಿದ ಇಲಾಖೆ ಆಡಳಿತ ಅಧಿಕಾರಿಗೆ ಸಂದೇಶ ಹೋಗಬೇಕು. ಜೊತೆಗೆ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ, ತಹಶೀಲ್ದಾರ್, ಕಂದಾಯ ಪರಿವೀಕ್ಷಕರು ಸೇರಿದಂತೆ ಎಲ್ಲಾ ಸರ್ಕಾರಿ ಅಧಿಕಾ–



ರಿಗಳ ವಿಳಾಸ ಹಾಗೂ ದೂರವಾಣಿ ಸಂಖ್ಯೆ ಅವರವರ ಕಚೇರಿ ಮತ್ತು ಸಂಬಂಧಿಸಿದ ವೆಬ್ಸೈಟ್ ಗಳಲ್ಲಿ ಲಭ್ಯವಿರಬೇಕು ಎಂದು ಸಿಎಂ ಡಿಕೆ ಶಿವಕುಮಾರ್ ಸೂಚನೆ ನೀಡಿದ್ದಾರೆ.

ಒಂದೇ ಜಿಲ್ಲೆ ಅಥವಾ ಕಚೇರಿಗಳಲ್ಲಿನ ವಿವಿಧ ಹುದ್ದೆಗಳಲ್ಲಿ ಒಂದೇ ಜಾತಿಯ ಅಧಿಕಾ–ರಿಗಳು ಇರುವಂತಿಲ್ಲ. ಅಧಿಕಾರಿಗಳಲ್ಲಿಯೂ ಸಾಮಾಜಿಕ ನ್ಯಾಯ ಇರಬೇಕು. ಬೇರೆಬೇರೆ ಜಾತಿ, ಧರ್ಮದವರು ಇರಬೇಕು. ಅಧಿಕಾ–ರಿಗಳ ಹಂತದಲ್ಲಿ ಜಾತಿ ಲಾಬಿ ಸಹಿಸುವುದಿಲ್ಲ ಎಂದು ತಿಳಿಸಿದ್ದಾರೆ.ಪ್ರತಿ ತಾಲೂಕಿನಲ್ಲಿಯೂ ಸಚಿವರ ಅಧ್ಯಕ್ಷತೆಯಲ್ಲಿ ಜನ ಸಂಪರ್ಕ ಸಭೆ ನಡೆಸಬೇಕು. ಪ್ರತಿ ಹೋಬಳಿ ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಜನ ಸಂಪರ್ಕ ಸಭೆ ನಡೆಸಬೇಕು. ಸ್ಥಳೀಯ ಮಟ್ಟದಲ್ಲಿಯೇ ಜನರ ಸಮಸ್ಯೆ ಬಗೆಹರಿಯಬೇಕು. ಮುಖ್ಯಮಂತ್ರಿಗಳ ಕಚೇರಿಯವರೆಗೂ ದೂರುಗಳು ಬರಬಾರದು. ಪ್ರತಿ ಜಿಲ್ಲೆಗೂ ಪ್ರವಾಸ ಮಾಡಿ ಪರಿಶೀಲಿಸುತ್ತೇನೆ ಎಂದು ತಿಳಿಸಿದ್ದಾರೆ.

## ಎಸ್.ಐ.ಆರ್–2026 ರ ಪ್ರಕ್ರಿಯೆಯನ್ನು ಪರಿಶೀಲಿಸಿದ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ

◆ ನೈಜ್ಯ ದೆಸೆ ನ್ಯೂಸ್



ಮಾನ್ವಿ : ಪಟ್ಟಣದಲ್ಲಿ ಬಿರುಸಿನ ಮತದಾರರ ಸಮಗ್ರ ಪರಿಷ್ಕರಣೆಯ ಪ್ರಕ್ರಿಯೆಯನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಪರಿಶೀಲಿಸಿ ಮಾತನಾಡಿ ಭಾರತ ಚುನಾವಣೆಯ ಆಯೋಗದ ಆದೇಶ ಹಿನ್ನೆಲೆಯಲ್ಲಿ ಪ್ರತಿಯೋಬ್ಬರು ಕೂಡ ತಮ್ಮ ದಾಖಲಾತಿಗಳನ್ನು ಬಿ.ಎಲ್.ಓ.ಗಳಿಗೆ ನೀಡಿ ಎಸ್.ಐ.ಆರ್–2026 ರ ಪ್ರಕ್ರಿಯೆಯಲ್ಲಿ ದಾಖಲಾತಿ ಮಾಡಿಕೊಳ್ಳಬೇಕು ಎಸ್.ಐ.ಆರ್–2026ರ ಪ್ರಕ್ರಿಯೆಯಿಂದ ದೂರ ಉಳಿದಲ್ಲಿ ಮತದಾನ ಹಕ್ಕಿನಿಂದ ವಂಚಿತರಾಗುತ್ತಾರೆ. ಮತದಾರರ ಪಟ್ಟಿಯಿಂದ ಹೋರಗಡೆ ಇದ್ದರೆ ಸರಕಾರದ ಸವಲತ್ತುಗಳಿಂದ ದೂರ ಉಳಿದಂತೆಯಾಗುತ್ತದೆ. ಪಟ್ಟಣದ ಶಾಲೆ,ಅಂಗನವಾಡಿ ಕೇಂದ್ರ, ಪುರಸಭೆ, ತಹಸಿಲ್ದಾರರ ಕಚೇರಿಗೆ ಭೇಟಿ ನೀಡಿ. ಎಸ್.ಐ.ಆರ್–2026 ರ ಪ್ರಕ್ರಿಯೆಯ ಅಗತ್ಯಮಾಹಿತಿಯನ್ನು ಬಿ.ಎಲ್.ಓ.ಗಳಿಂದ ಪಡೆಯಬಹುದಾಗಿದೆ ಮತದಾರರ ಸಮಗ್ರ ಪರಿಷ್ಕರಣೆಯ ಯಶಸ್ವಿಗೆ ಪ್ರತಿಯೊಬ್ಬರು ಸಹಕರಿಸುವ ಮೂಲಕ .ಸದೃಢ ಭಾರತ ನಿರ್ಮಾಣ ಕ್ಕೆ ಕೈ ಜೋಡಿಸುವಂತೆ ಕೋರಿದರು.

## ಹಲವು ತಿಂಗಳ ಯುದ್ಧದ ಬಳಿಕ ಜಗತ್ತಿಗೆ ಶುಭ ಸುದ್ದಿ: ಅಮೆ–ರಿಕ–ಇರಾನ್ ಶಾಂತಿ ಒಪ್ಪಂದ ಅಂತಿಮ, ಹೊರ್ಮುಝ್ ತೆರವು

◆ ನೈಜ್ಯ ದೆಸೆ ನ್ಯೂಸ್

ನವದೆಹಲಿ ಜಾಗತಿಕ ಆರ್ಥಿಕತೆ ಮತ್ತು ತೈಲ ಮಾರುಕಟ್ಟೆಯನ್ನು ತಲ್ಲಣಗೊಳಿಸಿದ್ದ ಅಮೆರಿಕ ಹಾಗೂ ಇರಾನ್ ನಡುವಿನ ಮಹಾ ಸಮರಕ್ಕೆ (ಗಖ ಖಡಿಚಿಟಿ ಘಚಿಡಿ) ಕೊನೆಗೂ ಶಾಶ್ವತ ಬ್ರೇಕ್ ಬೀಳುವ ಕಾಲ ಸನ್ನಿಹಿತವಾಗಿದೆ. ಕಳೆದ 100ಕ್ಕೂ ಹೆಚ್ಚು ದಿನಗಳಿಂದ ನಡೆಯುತ್ತಿದ್ದ ಭೀಕರ ಯುದ್ಧ ಮತ್ತು ರಾಜತಾಂತ್ರಿಕ ಹಗ್ಗಜಗ್ಗಾಟಕ್ಕೆ ತೆರೆಬಿದ್ದಿದ್ದು, ಉಭಯ ದೇಶಗಳ ನಡುವಿನ ಶಾಂತಿ ಒಪ್ಪಂದ ಅಂತಿಮಗೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ (ಆಂಟಿಚಿಟಜ ಖಿಡಿಣಟಠಿ) ಘೋಷಿಸಿದ್ದಾರೆ.ಈ ಮಹತ್ವದ ಬೆಳವಣಿಗೆಯಿಂದಾಗಿ ಇಡೀ ಜಗತ್ತಿಗೆ ತೈಲ ಬಿಕ್ಕಟ್ಟಿನ ಆತಂಕದಿಂದ ದೊಡ್ಡ ಮುಕ್ತಿ ಸಿಕ್ಕಂತಾಗಿದೆ.ಮುಖ್ಯಾಂಶಗಳು ಅಮೆ–ರಿಕ–ಇರಾನ್ ನಡುವೆ ಶಾಂತಿ ಒಪ್ಪಂದ ಅಂತಿಮ ಹೊರ್ಮುಝ್ ಜಲಸಂಧಿಯ ನೌಕಾ ದಿಗ್ಬಂಧನ ತೆರವು ಜೂನ್ 19ರಂದು ಸ್ವಿಟ್ಜರ್ಲೆಂಡ್‌ನಲ್ಲಿ ಅಧಿಕೃತ ಸಹಿ ವಿಶ್ವದ ಹಡಗುಗಳ ಮೂಲಕ ತೈಲ ಹರಿಯಲಿ: ಟ್ರಂಪ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ 'ಟ್ರೂತ್ ಸೋಷಿಯಲ್' ಖಾತೆಯಲ್ಲಿ ಈ ಶುಭ ಸುದ್ದಿಯನ್ನು ಹಂಚಿಕೊಂಡಿದ್ದಾರೆ. 'ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಜೊತೆಗಿನ ಒಪ್ಪಂದವು ಈಗ ಪೂರ್ಣಗೊಂಡಿದೆ. ಎಲ್ಲ–ರಿಗೂ ಅಭಿನಂದನೆಗಳು! ನಾನು ಇಂದಿನಿಂದ ಹಾರ್ಮುಜ್ ಜಲಸಂಧಿಯನ್ನು ಟೋಲ್–ಮುಕ್ತವಾಗಿ ಮುಕ್ತಗೊಳಿಸಲು ಸಂಪೂರ್ಣ




ಅಧಿಕಾರ ನೀಡುತ್ತಿದ್ದೇನೆ. ಹಾಗೆಯೇ, ಅಮೆ–ರಿಕ ನೌಕಾಪಡೆಯ ದಿಗ್ಬಂಧನವನ್ನು ತಕ್ಷಣವೇ ತೆಗೆದುಹಾಕಲು ಆದೇಶಿಸುತ್ತಿದ್ದೇನೆ. ವಿಶ್ವದ ಹಡಗುಗಳೇ, ನಿಮ್ಮ ಇಂಜಿನ್‌ಗಳನ್ನು ಸ್ಟಾರ್ಟ್ ಮಾಡಿ. ತೈಲವು ಮುಕ್ತವಾಗಿ ಹರಿಯಲಿ!' ಎಂದು ಟ್ರಂಪ್ ಬರೆದುಕೊಂಡಿದ್ದಾರೆ. ಫೆಬ್ರವರಿ 28ರಂದು ಆರಂಭವಾಗಿದ್ದ ಈ ಯುದ್ಧದಿಂದಾಗಿ ಹೊರ್ಮುಝ್ ಜಲಸಂಧಿ ಬಂದ್ ಆಗಿತ್ತು. ಆದರೆ ಈಗ ಇರಾನ್ ಕೂಡ ಈ ಒಪ್ಪಂದವನ್ನು ಖಚಿತಪಡಿಸಿದ್ದು, ಇವತ್ತು ರಾತ್ರಿಯಿಂದಲೇ ಹೊರ್ಮುಝ್ ಮುಕ್ತಗೊಳ್ಳಲಿದೆ ಎಂದು ತಿಳಿಸಿದೆ.ಅಮೆರಿಕದ ಮೇಲೆ ಇರಾನ್‌ಗೆ ಇನ್ನೂ ಅನುಮಾನ!ಇರಾನ್ ಮಾಧ್ಯಮಗಳ ಪ್ರಕಾರ, 'ದೇವರ ಕೃಪೆಯಿಂದಾಗಿ ದುಷ್ಟ ಅಮೆರಿಕನ್ ಮತ್ತು ಜಿಯೋನಿಸ್ಟ್ ಶತ್ರುಗಳಿಗೆ ಶರಣಾಗುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂಬುದನ್ನು ನಮ್ಮ ಹೋರಾಟಗಾರರು ಸಾಬೀತುಪಡಿಸಿದ್ದಾರೆ. ಆದ–'ರೆ, ಈ ಒಪ್ಪಂದದ ಅರ್ಥ ನಮ್ಮ ಶತ್ರುವನ್ನು ಪೂರ್ತಿಯಾಗಿ ನಂಬುವುದು ಎಂದಲ್ಲ. ಇದನ್ನು ಅಪನಂಬಿಕೆಯೊಂದಿಗೇ ಅಂತಿಮಗೊಳಿಸಲಾಗಿದೆ. ಅಮೆರಿಕದ ಬದ್ಧತೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತೇವೆ' ಎಂದು ಇರಾನ್ ಹೇಳಿದೆ. ಮುಂದಿನ 60 ದಿನಗಳ ಕದನ ವಿರಾಮದ ಅವಧಿಯಲ್ಲಿ ಅಂತಿಮ ಒಪ್ಪಂದದ ಮಾತುಕತೆಗಳು ಮುಂದುವರಿಯಲಿವೆ. ಪಾಕಿಸ್ತಾನದ ಮಧ್ಯಸ್ಥಿಕೆ, ಜೂನ್ 19ಕ್ಕೆ ಸಹಿ ಅಮೆ–ರಿಕ ಮತ್ತು ಇರಾನ್ ನಡುವಿನ ಈ ಸಂಘರ್ಷವನ್ನು ತಣ್ಣಗಾಗಿಸಲು ಪಾಕಿಸ್ತಾನ ಪ್ರಮುಖ ಮಧ್ಯಸ್ಥಿಕೆ ವಹಿಸಿತ್ತು. ಈ ಬಗ್ಗೆ ಮಾಹಿತಿ ನೀಡಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, 'ವ್ಯಾಪಕ ಮಾತುಕತೆಗಳ ನಂತರ ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದ ಏರ್ಪಟ್ಟಿದೆ ಎಂದು ಘೋಷಿಸಲು ಸಂತೋಷವಾಗುತ್ತಿದೆ. ಲೆಬನಾನ್ ಸೇರಿದಂತೆ ಎಲ್ಲಾ ರಂಗಗಳಲ್ಲಿ ಮಿಲಿಟರಿ ಕಾರ್ಯಾಚರಣೆಗಳನ್ನು ತಕ್ಷಣವೇ ಮತ್ತು ಶಾಶ್ವತವಾಗಿ ಕೊನೆಗೊಳಿಸಲು ಉಭಯ ದೇಶಗಳು ಒಪ್ಪಿಕೊಂಡಿವೆ. ಜೂನ್ 19ರ ಶುಕ್ರವಾರದಂದು ಸ್ವಿಟ್ಜರ್ಲೆಂಡ್‌ನಲ್ಲಿ ಅಧಿಕೃತ ಸಹಿ ಸಮಾರಂಭ ನಡೆಯಲಿದೆ' ಎಂದು ತಿಳಿಸಿದ್ದಾರೆ. ಜುಲೈ ಆರಂಭದಲ್ಲಿ ಇರಾನ್‌ನ ಮಾಜಿ ಸುಪ್ರೀಂ ಲೀಡರ್ ಆಯತೊಲ್ಲಾ ಖಮೇನಿ ಅವರ ಅಂತ್ಯಕ್ರಿಯೆ ನಡೆಯಲಿದ್ದು, ಅದಕ್ಕೂ ಮುನ್ನವೇ ಈ ಕದನ ವಿರಾಮ ಜಾರಿಗೆ ಬರುತ್ತಿರುವುದು ಗಮನಾರ್ಹ.ನೆತನ್ಯಾಹು ವಿರುದ್ಧ ಟ್ರಂಪ್ ಆಕ್ರೋಶ ಒಂದೆಡೆ ಶಾಂತಿ ಮಾತುಕತೆಗಳು ಅಂತಿಮ ಹಂತ ತಲುಪಿದ್ದಾಗಲೇ, ಇಸ್ರೇಲ್ ಸೇನೆ ಲೆಬನಾನ್ ಮೇಲೆ ಭೀಕರ ದಾಳಿ ನಡೆಸಿತ್ತು. ಇಸ್ರೇಲ್‌ನ ಈ ಕ್ರಮಕ್ಕೆ ಅಮೆರಿಕ ಅಧ್ಯಕ್ಷ ಟ್ರಂಪ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದ್ದಾರೆ ಎನ್ನಲಾಗಿದೆ. ಸದ್ಯಕ್ಕೆ ಯುದ್ಧ ನಿಲ್ಲುವ ಮುನ್ಸೂಚನೆ ಸಿಕ್ಕಿದ್ದರೂ, ಲೆಬನಾನ್ ಮೇಲಿನ ದಾಳಿಯನ್ನು ಇಸ್ರೇಲ್ ಸಂಪೂರ್ಣವಾಗಿ ನಿಲ್ಲಿಸುತ್ತದೆಯೇ ಮತ್ತು ಇಸ್ರೇಲ್ ಈ ಒಪ್ಪಂದದ ಭಾಗವಾಗಿದೆಯೇ ಇಲ್ಲವೇ ಎಂಬುದು ಜಿನೇವಾದಲ್ಲಿ ನಡೆಯುವ ಸುದ್ದಿಗೋಷ್ಠಿಯ ಬಳಿಕವಷ್ಟೇ ಸ್ಪಷ್ಟವಾಗಬೇಕಿದೆ.

